ಶಾಲಾ ಶಿಕ್ಷಣ ಇಲಾಖೆ

# ನಲಿಕಲಿ

## ಅಭ್ಯಾಸ ಸಹಿತ ಪಠ್ಯಪುಸ್ತಕ

## ಭಾಗ – 2

# ಕನ್ನಡ

©KTBS NOT TO BE REPUBLISHED

# 3

## ಮೂರನೇ ತರಗತಿ

ಸಮಗ್ರ ಶಿಕ್ಷಣ, ಕರ್ನಾಟಕ
ನೃಪತುಂಗ ರಸ್ತೆ
ಬೆಂಗಳೂರು – 560 001

ಕರ್ನಾಟಕ ಪಠ್ಯಪುಸ್ತಕ ಸಂಘ
6ನೇ ಅಡ್ಡರಸ್ತೆ, ಮಲ್ಲೇಶ್ವರಂ
ಬೆಂಗಳೂರು – 560 003

## ನನ್ನ ಕಲಿಕೆಯ ವಿಷಯಗಳು

# ಭಾಗ–2


| ಕ್ರ.ಸಂ. | ಘಟಕಗಳು | ಪುಟ ಸಂಖ್ಯೆ |
|---|---|---|
| ೫. | ಆನೆ ಬಂತೊಂದಾನೆ | 1 - 14 |
| ೬. | ಯಕ್ಷಗಾನ | 15 - 27 |
| ೭. | ಹೂವಾಡಗಿತ್ತಿ (ಪದ್ಯ) | 28 - 39 |
| ೮. | ನಮ್ಮ ಶಾಲಾ ಪತ್ರಿಕೆ | 40 - 58 |
| ೯. | ಕಿತ್ತೂರು ರಾಣಿ ಚೆನ್ನಮ್ಮ | 59 - 71 |
| ೧೦. | ಪತ್ರಿಕೆ ಓದೋಣ– ಸುದ್ದಿ ತಿಳಿಯೋಣ | 72 - 85 |
| * | ಮೌಲ್ಯಾಂಕನ–ಸೂಚಿತ ಕಲಿಕಾ ಫಲಗಳು | 86 |


©KTBS NOT TO BE REPUBLISHED

# ೫. ಆನೆ ಬಂತೊಂದಾನೆ....!!

## ಪ್ರವೇಶ:









NOT TO BE REPUBLISHED
KTBS

* ಈ ರೀತಿಯ ಚಿತ್ರಗಳನ್ನು ನೀನು ಎಲ್ಲೆಲ್ಲಿ ನೋಡಿರುವೆ?
* ಈ ಚಿತ್ರಗಳ ಬಗ್ಗೆ ನೀನು ಏನೆಲ್ಲಾ ತಿಳಿದುಕೊಂಡಿರುವೆ?
* ಚಿತ್ರದಲ್ಲಿ ಧರಿಸಿರುವ ಉಡುಪುಗಳ ಬಗ್ಗೆ ಮಾತನಾಡು.



ಒಮ್ಮೆ ಒಬ್ಬ ವ್ಯಾಪಾರಿ ಅಭಿಮನ್ಯು ಎನ್ನುವ ಆನೆಯನ್ನು ಸಾಕಿದ್ದನು. ಅದು ಬಹಳ ದೊಡ್ಡ ಗಾತ್ರದ ಆನೆ. ಮಕ್ಕಳು ಅಭಿಮನ್ಯುವಿನ ಹತ್ತಿರ ಬರಲು ಹೆದರುತ್ತಿದ್ದರು. ವ್ಯಾಪಾರಿಯು ಅಭಿಮನ್ಯುವನ್ನು ಹೊರಗಿನ ಕೆಲಸಕ್ಕೆ ಕಳುಹಿಸಿ ಸಾಕಷ್ಟು ಹಣ ಗಳಿಸುತ್ತಿದ್ದನು. ಕಷ್ಟದ ಕೆಲಸಗಳಿಗೆ ಮತ್ತು ಕಾಡಿನಲ್ಲಿ ಬಿದ್ದ ಮರಗಳನ್ನು ಎತ್ತಿ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಾಗಿಸಲು ಅಭಿಮನ್ಯುವನ್ನು ಬಳಸುತ್ತಿದ್ದರು. ದೊಡ್ಡ ದೊಡ್ಡ ಸಮಾರಂಭಗಳಿದ್ದರೆ ಅಲ್ಲಿ ಅಭಿಮನ್ಯು ಹಾಜರು ಇರುತ್ತಿದ್ದ.

ಒಮ್ಮೆ ಊರಿನವರು ಒಂದು ಹಬ್ಬವನ್ನು ಮಾಡಲು ತೀರ್ಮಾನಿಸಿದರು. ಊರಿನ ದೇವಸ್ಥಾನದ ಮುಂದೆ ಒಂದು ಧ್ವಜ ಕಟ್ಟಲು ಕಾಡಿನಲ್ಲಿ ಬಿದ್ದಿದ್ದ ಒಂದು ದೊಡ್ಡ ತೇಗದ ಮರವನ್ನು ಕಡಿದು ಕಂಬವನ್ನು ಸಿದ್ಧಪಡಿಸಿದರು. ಮರದ ಕಂಬ ಬಹಳ ಉದ್ದ ಮತ್ತು ದಪ್ಪವಿತ್ತು. ಅದನ್ನು ಹಳ್ಳಿಯ ಜನರಿಂದ ತರಲು ಸಾಧ್ಯವಾಗಲಿಲ್ಲ. ಆದ್ದರಿಂದ ಅವರು ಅಭಿಮನ್ಯುವನ್ನು ಕರೆ ತಂದರು.

**ಸಾಗಿಸು:** ತೆಗೆದುಕೊಂಡು ಹೋಗು
**ಕಂಬ:** ನೇರವಾದ ಮರದ ತುಂಡು
**ದಂತ:** ಹಲ್ಲು





ಮರದ ಕಂಬವನ್ನು ದೇವಸ್ಥಾನದ ಮುಂದಿರುವ ಗುಂಡಿಗೆ ಹಾಕಬೇಕಿತ್ತು. ಅಭಿಮನ್ಯುವು ಕಂಬವನ್ನು ಗುಂಡಿಯಲ್ಲಿ ಹಾಕಲು ಬಂದಿತು. ಆದರೆ ಇದ್ದಕ್ಕಿದ್ದಂತೆ ಹಿಂದೆ ಸರಿಯಿತು.

ಮಾವುತ ಅಭಿಮನ್ಯುವಿಗೆ ಕಂಬವನ್ನು ಗುಂಡಿಯಲ್ಲಿ ಹಾಕುವಂತೆ ಆದೇಶಿಸಿದ. ಆದರೆ ಅಭಿಮನ್ಯು ಮುಂದೆ ಹೋಗಲಿಲ್ಲ. ಮಾವುತ ಮತ್ತೆ ಮತ್ತೆ ಹೇಳಿದರೂ ಕೇಳಲಿಲ್ಲ.

ಸಿಟ್ಟಿನಿಂದ ಮಾವುತ ದೊಣ್ಣೆ ಮುರಿಯುವವರೆಗೂ ಹೊಡೆದನು. ಆದರೂ ಅಭಿಮನ್ಯು ಮುಂದೆ ಹೋಗಲೇ ಇಲ್ಲ!. ಮಾವುತನು ಹೊಡೆದ ಏಟಿನ ನೋವು ತಾಳಲಾರದೆ ಸಿಟ್ಟಿನಿಂದ ಮೈ ಕೊಡವಿಕೊಂಡಿತು. ಇದಕ್ಕೆ ಹೆದರಿದ ಜನರೆಲ್ಲ ದೂರ ಸರಿದರು ಮತ್ತು ಈ ಆನೆ ಸರಿಯಿಲ್ಲ ಎಂದುಕೊಂಡರು.



© KTBS NOT TO BE REPUBLISHED

ಅಭಿಮನ್ಯು ಗುಂಡಿಯ ಹತ್ತಿರ ಹೋಗಿ ಮಂಡಿಯೂರಿ ಕುಳಿತಿತು. ಅದು ತನ್ನ ದಂತವನ್ನು ಗುಂಡಿಯ ಮೇಲೆ ಇರಿಸಿತು. ಗುಂಡಿಯ ಒಳಗೆ ತನ್ನ ಸೊಂಡಿಲನ್ನು ಇಳಿಸಿ, ಅಲ್ಲಿದ್ದ ಪ್ರಾಣಿಯನ್ನು ಎತ್ತಿ ನೆಲದ ಮೇಲೆ ಇರಿಸಿತು. ಇದನ್ನು ಅಲ್ಲಿದ್ದ ಜನರೆಲ್ಲರೂ ಗಮನಿಸಿದರು. "ಓಹೋ! ಬೆಕ್ಕು ಗುಂಡಿಯಲ್ಲಿ ಅಡಗಿತ್ತು".



ಜನರಿಗೆ ಅಭಿಮನ್ಯು ಮಾವುತನ ಆಜ್ಞೆಯನ್ನು ಏಕೆ ಪಾಲಿಸಲಿಲ್ಲ ಎಂಬ ಸತ್ಯಾಂಶ ಅರ್ಥವಾಯಿತು. ದೊಡ್ಡ ಗಾತ್ರದ ಅಭಿಮನ್ಯು ಅಷ್ಟು ಚಿಕ್ಕ ಬೆಕ್ಕನ್ನು ನೋಯಿಸಲು ಬಯಸಲಿಲ್ಲ. ಅಭಿಮನ್ಯುವಿನ ಈ ಗುಣಕ್ಕೆ ಎಲ್ಲರೂ ಮನಸೋತರು. ಅಭಿಮನ್ಯುವು ಧ್ವಜದ ಕಂಬವನ್ನು ಗುಂಡಿಯಲ್ಲಿ ನಿಲ್ಲಿಸಿತು.

ಜನರು ಅಭಿಮನ್ಯುವನ್ನು ಪ್ರೀತಿಯಿಂದ ಅಭಿನಂದಿಸಿದರು. ಅದಕ್ಕೆ ಕಬ್ಬು, ಬೆಲ್ಲ, ಹಣ್ಣುಗಳನ್ನು ತಂದು ಕೊಟ್ಟರು. ಮಾವುತ ಉಚಿತ ಸವಾರಿ ಮಾಡಲು ಅವಕಾಶ ನೀಡಿದಾಗ ಮಕ್ಕಳು ತುಂಬಾ ಸಂತೋಷ ಪಟ್ಟರು. ಮಕ್ಕಳೂ ಕೂಡ ಅಭಿಮನ್ಯುವನ್ನು ಪ್ರೀತಿಸಲು ಆರಂಭಿಸಿದರು. ಅಂದಿನಿಂದ ಅಭಿಮನ್ಯುವು ಜನರ ಮುದ್ದಿನ ಆನೆಯಾಯಿತು. ಹಬ್ಬದ ನೆನಪಿಗಾಗಿ ಜನರೆಲ್ಲರೂ ಗ್ರಾಮದ ಸುತ್ತ ಸಂತೋಷದಿಂದ ಗಿಡಗಳನ್ನು ನೆಟ್ಟು ಪೋಷಿಸಿದರು.

@KTBS NOT TO BE REPUBLISHED

**ಹೊಸ ಪದಗಳ ಅರ್ಥವನ್ನು ಈ ರೀತಿ ಅಭ್ಯಾಸ ಮಾಡೋಣ.**

### ಪದ–ಪದಗಳ ಅರ್ಥ:

**ಹಾಜರು:** ಇರುವಿಕೆ, ಉಪಸ್ಥಿತಿ

**ಆಜ್ಞೆ:** ಆದೇಶ

**ಮಾವುತ:** ಆನೆಯನ್ನು ಪಳಗಿಸುವವ

**ಪೋಷಿಸು:** ಕಾಪಾಡು, ರಕ್ಷಿಸು

## ೧. ಗಮನಿಸಿ ಓದೋಣ.

| | |
|---|---|
| ೧. ಆನೆಯು **ದೊಡ್ಡ** ಪ್ರಾಣಿ.<br>ಬೆಕ್ಕು **ಚಿಕ್ಕ** ಪ್ರಾಣಿ. | ೨. ಮನೆಯ **ಹೊರಗೆ** ಅಂಗಳವಿದೆ<br>ಮನೆಯ **ಒಳಗೆ** ಟಿ.ವಿ. ಇದೆ. |
| ೩. ಶಾಲೆಯ **ಮುಂದೆ** ಧ್ವಜಸ್ತಂಭ ಇದೆ.<br>ಶಾಲೆಯ **ಹಿಂದೆ** ಆಟದ ಮೈದಾನವಿದೆ. | ೪. ಮಕ್ಕಳು **ಪ್ರಶ್ನೆ** ಕೇಳುವರು.<br>ಗುರುಗಳು **ಉತ್ತರ** ಹೇಳುವರು. |
| ೫. ಮರದ **ಮೇಲೆ** ಹಕ್ಕಿಯ ಗೂಡಿದೆ.<br>ಮರದ **ಕೆಳಗೆ** ಇರುವೆಯ ಗೂಡಿದೆ. | ೬. ಅಜ್ಜಿಯ ಮನೆಗೆ ಹೋದಾಗ **ಸಂತೋಷ**ವಾಯಿತು.<br>ಅಜ್ಜಿಯ ಮನೆ ಬಿಟ್ಟು ಬರುವಾಗ **ದುಃಖ**ವಾಯಿತು. |

**ದೊಡ್ಡ – ಚಿಕ್ಕ, ಹೊರಗೆ – ಒಳಗೆ, ಮುಂದೆ – ಹಿಂದೆ**
**ಪ್ರಶ್ನೆ – ಉತ್ತರ, ಮೇಲೆ – ಕೆಳಗೆ, ಸಂತೋಷ – ದುಃಖ**

ವಿರುದ್ಧ ಅರ್ಥ ಬರುವ ಪದಗಳನ್ನು ಗಮನಿಸೋಣ.

NOT TO BE REPUBLISHED @KTBS

## ೨. ಕಥೆಯಲ್ಲಿನ ಈ ಘಟನೆಗಳಿಗೆ ಅನುಕ್ರಮ ಸಂಖ್ಯೆಗಳನ್ನು ನೀಡೋಣ.

| | |
|---|---|
| ಕಷ್ಟದ ಕೆಲಸಗಳಿಗೆ ಈ ಅಭಿಮನ್ಯುವನ್ನು ಬಳಸುತ್ತಿದ್ದರು. | |
| ಅಂದಿನಿಂದ ಅಭಿಮನ್ಯು ಜನರ ಮುದ್ದಿನ ಆನೆಯಾಯಿತು. | |
| ಅಭಿಮನ್ಯು ಕಂಬವನ್ನು ಗುಂಡಿಯಲ್ಲಿ ಹಾಕಲು ಬಂದಿತು. ಆದರೆ ಇದ್ದಕ್ಕಿದ್ದಂತೆ ಹಿಂದೆ ಸರಿಯಿತು. | |
| ಜನರಿಗೆ ಅಭಿಮನ್ಯು ಮಾವುತನ ಆಜ್ಞೆಯನ್ನು ಏಕೆ ಪಾಲಿಸಲಿಲ್ಲ ಎಂಬ ಸತ್ಯಾಂಶ ಅರ್ಥವಾಯಿತು. | |
| ಒಬ್ಬ ವ್ಯಾಪಾರಿ ಅಭಿಮನ್ಯು ಎನ್ನುವ ಆನೆಯನ್ನು ಸಾಕಿದ್ದನು. | |
| ಅಭಿಮನ್ಯು ಗುಂಡಿಯ ಹತ್ತಿರ ಹೋಗಿ ಮಂಡಿಯೂರಿ ಕುಳಿತು, ಅದರಲ್ಲಿದ್ದ ಬೆಕ್ಕನ್ನು ಹೊರಗೆ ತೆಗೆಯಿತು. | |
| ಒಮ್ಮೆ ಊರಿನವರು ಒಂದು ಹಬ್ಬ ಮಾಡಲು ತೀರ್ಮಾನಿಸಿ, ಒಂದು ದೊಡ್ಡ ತೇಗದ ಮರದಿಂದ ಕಂಬವನ್ನು ಸಿದ್ಧಪಡಿಸಿದರು. | |
| ಅದನ್ನು ಹಳ್ಳಿಯ ಜನರಿಂದ ತರಲು ಸಾಧ್ಯವಾಗುತ್ತಿರಲಿಲ್ಲ ಆದ್ದರಿಂದ ಅವರು ಅಭಿಮನ್ಯುವನ್ನು ಕರೆ ತಂದರು. | |

೩. ಗ್ರಂಥಾಲಯದಲ್ಲಿ ಓದಿದ ಯಾವುದಾದರೂ ಐದು ಪುಸ್ತಕಗಳನ್ನು ಹೆಸರಿಸಿ, ಅವುಗಳ ಪುಟ ಸಂಖ್ಯೆಯನ್ನು ಪಟ್ಟಿ ಮಾಡಿಕೊಳ್ಳೋಣ.

| ಕ್ರ.ಸಂ | ಆಯ್ಕೆ ಮಾಡಿದ ಪುಸ್ತಕದ ಹೆಸರು | ಒಟ್ಟು ಪುಟಸಂಖ್ಯೆ | ಅದರಲ್ಲಿ ನಿನ್ನ ಇಷ್ಟದ ಚಿತ್ರದ ಹೆಸರು | ಅದರ ಪುಟಸಂಖ್ಯೆ |
|---|---|---|---|---|
| ೧. | | | | |
| ೨. | | | | |
| ೩. | | | | |
| ೪. | | | | |
| ೫. | | | | |

೪. ಯಾವುದಾದರೂ ೧೦ ಪುಸ್ತಕಗಳನ್ನು ಹೆಸರಿಸಿ, ಅವುಗಳ ಒಟ್ಟು ಪುಟ ಸಂಖ್ಯೆಗಳನ್ನು ಬರೆಯೋಣ.

@KTBS
NOT TO BE REPUBLISHED

| ಕ್ರ.ಸಂ | ಪುಸ್ತಕಗಳ ಹೆಸರು | ಒಟ್ಟು ಪುಟಗಳ ಸಂಖ್ಯೆ |
|---|---|---|
| ೧. | | |
| ೨. | | |
| ೩. | | |
| ೪. | | |
| ೫. | | |
| ೬. | | |
| ೭. | | |
| ೮. | | |
| ೯. | | |
| ೧೦. | | |

**ವಿಶೇಷ ಸೂಚನೆ:** ನಿಯತಕಾಲಿಕೆಗಳು, ಶಾಲಾ ಗ್ರಂಥಾಲಯ, ಸ್ಥಳೀಯ ಗ್ರಂಥಾಲಯ, ವಾಚನಾಲಯ, ಮನೆಯಲ್ಲಿನ ವಿವಿಧ ಪುಸ್ತಕಗಳನ್ನು ಗಮನಿಸುವುದು.

## ೫. ಶಿಕ್ಷಕರೊಂದಿಗೆ ಚರ್ಚಿಸಿ, ಹೊಸಪದಗಳಿಗೆ ಅರ್ಥ ಕಂಡುಕೊಳ್ಳೋಣ.

**'ಹಾಜರು' ಪದದ ಅರ್ಥವನ್ನು ಶಬ್ಧಕೋಶ ಹುಡುಕಿ ಈ ಕಥೆಗೆ ಸೂಕ್ತವಾದುದನ್ನು ಆರಿಸಿ ಹೇಳು.**

**ಒಬ್ಬ ವ್ಯಾಪಾರಿಯು ಅಭಿಮನ್ಯು ಎಂಬ ಆನೆ ಸಾಕಿದ್ದ. ಅವನು ಅಭಿಮನ್ಯುವನ್ನು ಹೊರಗಿನ ಕೆಲಸಕ್ಕೆ ಕಳುಹಿಸಿ ಸಾಕಷ್ಟು ಹಣ ಗಳಿಸಿದ್ದನು. ಅಭಿಮನ್ಯುವನ್ನು ಕಾಡಿನಲ್ಲಿ ಬಿದ್ದು ಹೋಗುತ್ತಿದ್ದ ಮರಗಳನ್ನು ಎತ್ತಿ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಾಗಿಸಲು ಬಳಸುತ್ತಿದ್ದರು. ದೊಡ್ಡದೊಡ್ಡ ಹಬ್ಬಗಳಿದ್ದರೆ ಅಲ್ಲಿ ಅಭಿಮನ್ಯು 'ಹಾಜರು' ಇರುತ್ತಿದ್ದ. ಉತ್ಸವದ ಮೆರವಣಿಗೆಯಲ್ಲಿ ಮುಂದೆ ಇರುತ್ತಿದ್ದ.**

**'ಹಾಜರು' ಎಂದರೆ ಭಾಗವಹಿಸು, ಪಾಲ್ಗೊಳ್ಳು, ಇರುವಿಕೆ ಎಂದು ಅರ್ಥ ಬರುತ್ತದೆ.**

**ಉದಾ:** ೧. ನಾನು ಪ್ರತಿದಿನ ಶಾಲೆಗೆ ತಪ್ಪದೇ **ಹಾಜರಾಗುತ್ತೇನೆ.**

೨. ವೈದ್ಯರು ನೀಡಿದ ಸಮಯಕ್ಕೆ ಸರಿಯಾಗಿ **ಹಾಜರಾಗುತ್ತೇನೆ.**

೩. ಸಭೆ ಸಮಾರಂಭಗಳಲ್ಲಿ ಗಣ್ಯರು **ಹಾಜರಿರುತ್ತಾರೆ.**

**ಮಾವುತ:** **ಮಕ್ಕಳೇ, ದಸರಾ ಮೆರವಣಿಗೆಗೆ ಆನೆ ಬಿಡಾರದಿಂದ ಆನೆಗಳನ್ನು ಕರೆ ತಂದು, ದಸರಾ ಮೆರವಣಿಗೆಯಲ್ಲಿ ಅಂಬಾರಿ ಹೊರಲು ಅವುಗಳನ್ನು ಪಳಗಿಸುತ್ತಾರೆ. ಹೀಗೆ ಆನೆಯನ್ನು ವಿವಿಧ ಕಾರಣಕ್ಕಾಗಿ ಪಳಗಿಸುವವರಿಗೆ 'ಮಾವುತ' ಎನ್ನುತ್ತಾರೆ.**

**'ಮಾವುತ' ಎಂದರೆ 'ಆನೆಯನ್ನು ಪಳಗಿಸುವವನು' ಎಂದು ಅರ್ಥ ಬರುತ್ತದೆ.**

**ಉದಾ:** ೧. ಆನೆಗಳೊಂದಿಗೆ **ಮಾವುತ** ಹಬ್ಬಕ್ಕೆ ಆಗಮಿಸುತ್ತಾನೆ.

೨. ದೇವಸ್ಥಾನದಲ್ಲಿ ಆನೆ ಜೊತೆ **ಮಾವುತ** ಇರುತ್ತಾನೆ.

೩. **ಮಾವುತ**ನು ಆನೆಗಳನ್ನು ಪಳಗಿಸುತ್ತಾನೆ.

**ಆಜ್ಞೆ :** **ಸರ್ಕಾರ ಜನ ಸಾಮಾನ್ಯರಿಗೆ ಉತ್ತಮ ಮಳೆಯಾಗಲು ಗಿಡಮರಗಳನ್ನು ಬೆಳೆಸುವಂತೆ ಆಜ್ಞೆ ಮಾಡಿತು.**

**'ಆಜ್ಞೆ'** ಎಂದರೆ **'ತಪ್ಪದೆ ಮಾಡಲೇಬೇಕು'** ಅಥವಾ **'ಕಡ್ಡಾಯವಾಗಿ ಪಾಲಿಸಬೇಕು'** ಎಂದು ಅರ್ಥ ಬರುತ್ತದೆ.

**ಉದಾ:** ೧. ಮಹಾರಾಜರು ಗಿಡಮರಗಳನ್ನು ಬೆಳೆಸಲು **ಆಜ್ಞೆಯನ್ನು** ಮಾಡಿದರು.

೨. ನ್ಯಾಯಾಲಯದ **ಆಜ್ಞೆಯನ್ನು** ಪಾಲಿಸದಿದ್ದಲ್ಲಿ ದಂಡ ವಿಧಿಸಲಾಗುತ್ತದೆ.

೩. ಸರ್ಕಾರದ **ಆಜ್ಞೆಯನ್ನು** ಪಾಲಿಸಬೇಕು.

NOT TO BE REPUBLISHED © KTBS

## ೬. ಪದ – ಪದಗಳ ಅರ್ಥ ಜೋಡಿಸೋಣ.

| | ಅ | ಬ |
|---|---|---|
| ೧. | ಹಾಜರು | ಬಚ್ಚಿಟ್ಟುಕೊ |
| ೨. | ಮಾವುತ | ಅನುಸರಣೆ |
| ೩. | ಆಜ್ಞೆ | ಭಾಗವಹಿಸು |
| ೪. | ಪಾಲನೆ | ಗುಂಡಿ |
| ೫. | ರಂಧ್ರ | ಆನೆಯನ್ನು ಪಳಗಿಸುವವ |
| ೬. | ಅಡಗು | ನೋಡು |
| ೭. | ವೀಕ್ಷಿಸು | ಆದೇಶ |

## ೭. ಈ ಪದಗಳು ಬಳಕೆಯಾಗಿರುವ ವಿವಿಧ ಸನ್ನಿವೇಶಗಳನ್ನು ತಿಳಿಯೋಣ.

**1. ಕಂಬ**

ಖೋಖೋ ಆಟದ ಮೈದಾನದಲ್ಲಿ ಎರಡು ಕಂಬಗಳಿರುತ್ತವೆ. ಆಟದಲ್ಲಿ ಎರಡು ತಂಡಗಳಿರುತ್ತವೆ. ಒಂದು ತಂಡ ಓಡಲು ಮತ್ತೊಂದು ತಂಡ ಅವರನ್ನು ಹಿಡಿಯಲು ಸಿದ್ಧರಾಗಿ ನಿಂತಿರುತ್ತಾರೆ. ಹಿಡಿಯುವ ತಂಡದ ಸದಸ್ಯರು ಈ ಎರಡು ಕಂಬಗಳ ನಡುವೆ ಕುಳಿತಿರುತ್ತಾರೆ. ಓಡುವ ತಂಡದವರು ಇವರಿಂದ ತಪ್ಪಿಸಿಕೊಳ್ಳಬೇಕು.

**2. ಧ್ವಜಸ್ತಂಭ**

ಸ್ವಾತಂತ್ರ್ಯ ದಿನಾಚರಣೆಯ ಪೂರ್ವಭಾವಿ ತಯಾರಿಗಾಗಿ ಧ್ವಜಸ್ತಂಭವನ್ನು ಬಣ್ಣ, ಹೂ ಹಾಗೂ ರಂಗೋಲಿಗಳಿಂದ ಅಲಂಕರಿಸಿದರು. ಅಂತೆಯೇ ಗ್ರಾಮದ ಗಾಂಧೀ ಚೌಕದಲ್ಲಿಯೂ ಧ್ವಜಸ್ತಂಭವನ್ನು ನೆಟ್ಟು ಗ್ರಾಮಸ್ಥರೆಲ್ಲರೂ ಸಿಂಗರಿಸಿದರು.

NOT TO BE REPUBLISHED ©KTBS

**ಈ ಪದಗಳ ಬಳಕೆಯ ಬೇರೆ ಸನ್ನಿವೇಶವನ್ನು ಬರೆಯೋಣ**

**ಅಡಗು**

______________________

______________________

______________________

______________________

**ಅಂಕುಶ**

______________________

______________________

______________________

______________________

## ೮. ನೀಡಿದ ಉತ್ತರಗಳಲ್ಲಿ ಸರಿಯಾದುದನ್ನು ಆರಿಸಿ, ಖಾಲಿ ಜಾಗವನ್ನು ತುಂಬೋಣ.

೧. ಖೋ-ಖೋ ಆಟದಲ್ಲಿ 'ಪೋಲು' ಎಂಬ ಪದದ ಅರ್ಥ ________________
(ಆಟದ ಅಂಕಣದ ಗೆರೆ, ಆಟದ ಅಂಕಣದ ಎರಡು ಬದಿಯಲ್ಲಿನ ಕಂಬ)

೨. 'ಧ್ವಜಸ್ತಂಭ' ಎಂಬ ಪದದ ಅರ್ಥ ________________
(ತೋರಣ ಕಟ್ಟುವ ಮರದ ಕಂಬ, ಧ್ವಜವನ್ನು ಕಟ್ಟುವ ಕಂಬ, ಭಾವುಟ ಕಟ್ಟುವ ದಾರ)

## ೯. ಗ್ರಂಥಾಲಯದ ಪುಸ್ತಕ ಅಥವಾ ವಾರ್ತಾ ಪತ್ರಿಕೆಗಳಲ್ಲಿ ಗಮನಿಸಿದ ಹೊಸ ಪದಗಳನ್ನು ಇಲ್ಲಿ ಪಟ್ಟಿ ಮಾಡೋಣ. ಶಬ್ಧಕೋಶ ಗಮನಿಸಿ ಅವುಗಳ ಅರ್ಥ ಕಂಡುಕೊಳ್ಳೋಣ.

| ಕ್ರ.ಸಂ. | ಹೊಸ ಪದಗಳು | ಶಬ್ಧಕೋಶದಲ್ಲಿನ ಅರ್ಥ |
|---|---|---|
| ೧. | | |
| ೨. | | |
| ೩. | | |
| ೪. | | |
| ೫. | | |
| ೬. | | |
| ೭. | | |
| ೮. | | |
| ೯. | | |
| ೧೦. | | |
| ೧೧. | | |
| ೧೨. | | |
| ೧೩. | | |
| ೧೪. | | |
| ೧೫. | | |

@KTBS NOT TO BE REPUBLISHED

## ೧೦. ಶಬ್ಧಕೋಶವನ್ನು ಬಳಸಿ ನೀಡಿರುವ ಪದಗಳಿಗೆ ಅರ್ಥಗಳನ್ನು ಹುಡುಕಿ ಬರೆಯೋಣ.

ಮಾದರಿ:




@KTBS
NOT TO BE REPUBLISHED

## ೧೧. ದಿನಕ್ಕೆ ಒಂದು ಹೊಸ ಪದ ಬರೆದು ಅದರ ಅರ್ಥವನ್ನು ಶಬ್ಧಕೋಶದಲ್ಲಿ ಹುಡುಕಿ ಬರೆಯೋಣ.

### ವಾರ–೧

| ಕ್ರ.ಸಂ. | ಹೊಸ ಪದಗಳು | ಶಬ್ಧಕೋಶದಲ್ಲಿನ ಅರ್ಥಗಳು |
|---|---|---|
| ದಿನ–೧ | | |
| ದಿನ–೨ | | |
| ದಿನ–೩ | | |
| ದಿನ–೪ | | |
| ದಿನ–೫ | | |
| ದಿನ–೬ | | |
| ದಿನ–೭ | | |

### ವಾರ–೨

| ದಿನ ಸಂಖ್ಯೆ | ಹೊಸ ಪದಗಳು | ಶಬ್ಧಕೋಶದಲ್ಲಿನ ಅರ್ಥಗಳು |
|---|---|---|
| ದಿನ–೧ | | |
| ದಿನ–೨ | | |
| ದಿನ–೩ | | |
| ದಿನ–೪ | | |
| ದಿನ–೫ | | |
| ದಿನ–೬ | | |
| ದಿನ–೭ | | |

@KTBS NOT TO BE REPUBLISHED

**ಸೂಚನೆ:** ಇದೆ ರೀತಿ ನೋಟ್ ಪುಸ್ತಕದಲ್ಲಿ ಪದಗಳನ್ನು ಸಂಗ್ರಹಿಸೋಣ.

**ಹೀಗೆ ಮಾಡು :** ಸಂಗ್ರಹಿಸಿದ ಹೊಸ ಪದಗಳನ್ನು ಪ್ರತಿ ಮೂರು ತಿಂಗಳಿಗೊಮ್ಮೆ ಒಟ್ಟುಗೂಡಿಸಿ ಒಂದು ಪುಟ್ಟ ಶಬ್ಧಕೋಶ ತಯಾರಿಸಿ ತರಗತಿಯಲ್ಲಿ ಪ್ರದರ್ಶಿಸು.

## ೧೨. ಸಂದರ್ಭವನ್ನು ಓದಿ, ಬಣ್ಣ ಹಾಕಿರುವ ಪದಗಳನ್ನು ಬಳಸಿ ಸ್ವಂತ ವಾಕ್ಯ ರಚಿಸೋಣ.

ನಾವು **ಆರೋಗ್ಯ**ದಿಂದ ಇರಲು ನಮ್ಮ ಸುತ್ತಲಿನ ವಾತಾವರಣವನ್ನು ಶುಚಿಯಾಗಿ ಇಡಬೇಕು. **ಸ್ವಚ್ಛತೆ**ಯ ನಿಯಮಗಳಾದ ಕಸವನ್ನು ನಿಗದಿತ ಬುಟ್ಟಿಯಲ್ಲಿ ಹಾಕುವುದು. ಆಗಾಗ ಸ್ವಚ್ಛವಾಗಿ ಕೈ ತೊಳೆದುಕೊಳ್ಳುವುದು ಇತ್ಯಾದಿ ನಿಮಯಗಳನ್ನು **ಪಾಲಿಸಬೇಕು.**

ನಮ್ಮನ್ನು ಅನಾರೋಗ್ಯದಿಂದ ಕಾಪಾಡಲು ಸರ್ಕಾರವು ಕೆಲವು **ಆದೇಶ**ಗಳನ್ನು ಹೊರಡಿಸುತ್ತದೆ. ಅದನ್ನು ನಾವು ಎಲ್ಲರ ಹಿತಕ್ಕಾಗಿ ಪಾಲಿಸಬೇಕು. ಉದಾಹರಣೆಗೆ ಕೋವಿಡ್ ಸಂದರ್ಭದಲ್ಲಿ ಸಾಮಾಜಿಕ ಅಂತರ **ಕಾಪಾಡು**ವುದು. ಕಡ್ಡಾಯವಾಗಿ ಮಾಸ್ಕ್ ಧರಿಸುವುದು ಇತ್ಯಾದಿ.

**ಪಾಲಿಸು:** ____________________

____________________

**ಆದೇಶ:** ____________________

____________________

**ಆರೋಗ್ಯ:** ____________________

____________________

**ಕಾಪಾಡು:** ____________________

____________________

@KTBS NOT TO BE REPUBLISHED

## ೧೩. ಓದಿದ ಪುಸ್ತಕಗಳ ಬಗ್ಗೆ ಬರೆಯೋಣ.

| ಕ್ರ.ಸಂ. | ಓದಿದ ಪುಸ್ತಕದ ಹೆಸರು | ಆ ಪುಸ್ತಕದಲ್ಲಿ ನಿನಗೆ ಇಷ್ಟವಾದ ವಿಷಯ | ಆ ವಿಷಯದ ಪುಟಸಂಖ್ಯೆ |
|---|---|---|---|
| ೧. | | | |
| ೨. | | | |
| ೩. | | | |
| ೪. | | | |
| ೫. | | | |

## ೧೪. ಪಠ್ಯವನ್ನು ಓದಿ, ಹೊಸ ಪದಗಳನ್ನು ಗುರುತಿಸೋಣ.

ಹಿಂದೆ ಮಗಧ ರಾಜ್ಯವನ್ನು ಗುಣಶೀಲ ಎಂಬ ರಾಜನು ಆಳುತ್ತಿದ್ದನು. ಒಮ್ಮೆ ಅವನ ರಾಜ್ಯಕ್ಕೆ ಬರಗಾಲ ಉಂಟಾಯಿತು. ಮಳೆ ಬಾರದೆ ಕೆರೆ ಬಾವಿಗಳೆಲ್ಲ ಬತ್ತಿ ಹೋದವು. ಆಹಾರದ ಅಭಾವ ಉಂಟಾಯಿತು. ಹೊರ ರಾಜ್ಯಗಳಿಂದ ಆಹಾರ ಧಾನ್ಯಗಳನ್ನು ತರಿಸಿ ವಿತರಿಸಿದನು. ಸಮಸ್ಯೆಯ ಪರಿಹಾರಕ್ಕೆ ಅನುಭವಿಗಳ ಸಭೆ ಕರೆದನು. ಆದರೆ ಯಾರಿಗೂ ಸಮಸ್ಯೆಯ ಮೂಲ ತಿಳಿಯಲಿಲ್ಲ. ಕೊನೆಗೆ ರಾಜನು ಪ್ರಜೆಗಳಲ್ಲಿಯೇ ಪರಿಹಾರವನ್ನು ಕೇಳುವ ತೀರ್ಮಾನಕ್ಕೆ ಬಂದನು. ಸೂಕ್ತ ಪರಿಹಾರವನ್ನು ತಿಳಿಸಿದವರಿಗೆ ಬಹುಮಾನ ಘೋಷಿಸಿದನು.

ಆ ರಾಜ್ಯದ ಒಂದು ಹಳ್ಳಿಯಲ್ಲಿ ಸುಮತಿಯೆಂಬ ಬುದ್ಧಿವಂತ ಹುಡುಗಿ ಇದ್ದಳು. ರಾಜನನ್ನು ಕಂಡು "ಮಹಾರಾಜರೇ, ನಮ್ಮ ರಾಜ್ಯದ ಗಡಿಯಲ್ಲಿರುವ ಕಾಡು ನಶಿಸಿ ಹೋಗಿರುವುದೇ ಇದಕ್ಕೆಲ್ಲ ಕಾರಣ ಎಂದು ನನಗನ್ನಿಸುತ್ತದೆ. ಹಾಗಾಗಿ ತಾವು ಗಿಡ ಮರಗಳನ್ನು ಕಡಿಯದಂತೆ ಪ್ರಜೆಗಳಿಗೆ ಸೂಚಿಸಬೇಕು. ಬಂಜರು ಭೂಮಿಯಲ್ಲಿ ಗಿಡಗಳನ್ನು ನೆಟ್ಟು ಬೆಳೆಸಲು ತಿಳಿಸಬೇಕು" ಎಂದು ವಿನಂತಿಸಿಕೊಂಡಳು.

ರಾಜನಿಗೆ ಅವಳ ಸಲಹೆ ಸರಿಕಂಡಿತು. ಅದರಂತೆ ಎಲ್ಲರಿಗೂ ಆದೇಶ ನೀಡಿದನು. ವರ್ಷಗಳು ಉರುಳಿದವು. ಗಿಡ ಮರಗಳು ಸೊಂಪಾಗಿ ಬೆಳೆದವು. ಮಳೆ ಬೆಳೆ ಸುಧಾರಿಸಿತು. ಬರಗಾಲ ನೀಗಿತು. ಸುಮತಿಗೆ ರಾಜನು ಸೂಕ್ತ ಬಹುಮಾನಗಳನ್ನು ನೀಡಿ ಗೌರವಿಸಿದನು.

❋ ಈ ಪಠ್ಯದಲ್ಲಿ ಗುರುತಿಸಿದ ಹೊಸ ಪದಗಳು:

© KTBS NOT TO BE REPUBLISHED

❋ ಗುರುತಿಸಿರುವ ಹೊಸ ಪದಗಳಿಗೆ ಶಬ್ಧಕೋಶದ ಸಹಾಯದಿಂದ ಅರ್ಥಗಳನ್ನು ಹುಡುಕಿ ಬರೆಯೋಣ.

| ಹೊಸ ಪದಗಳು | ಶಬ್ಧಕೋಶದ ಸಹಾಯದಿಂದ ಹುಡುಕಿದ ಅರ್ಥ |
|---|---|
| | |
| | |
| | |
| | |
| | |

❋ ಗುರುತಿಸಿರುವ ಹೊಸ ಪದಗಳನ್ನು ಬಳಸಿ ಸ್ವಂತ ವಾಕ್ಯಗಳನ್ನು ರಚಿಸೋಣ.

@KTBS NOT TO BE REPUBLISHED

## ೧೫. ಇದುವರೆಗೂ ಕಲಿತಿರುವ ಹೊಸ ಪದಗಳ ಉಕ್ತಲೇಖನವನ್ನು ತೆಗೆದುಕೊಳ್ಳೋಣ.

| ಕ್ರ.ಸಂ | ಪದಗಳು | ಕ್ರ.ಸಂ | ಪದಗಳು |
|---|---|---|---|
| 1. | | 11. | |
| 2. | | 12. | |
| 3. | | 13. | |
| 4. | | 14. | |
| 5. | | 15. | |
| 6. | | 16. | |
| 7. | | 17. | |
| 8. | | 18. | |
| 9. | | 19. | |
| 10. | | 20. | |

@KTBS NOT TO BE REPUBLISHED

**ತಪ್ಪಾದ ಪದಗಳನ್ನು ಸರಿಪಡಿಸಿ ಬರೆಯೋಣ.**

| | |
|---|---|
| | |
| | |
| | |
| | |
| | |

★ ಸುಗಮಕಾರರು ಪಠ್ಯದಲ್ಲಿ ಕಲಿತ ಪದಗಳನ್ನು ಉಕ್ತಲೇಖನ ನೀಡಿ, ದೃಢೀಕರಿಸಿ, ಹಿಮ್ಮಾಹಿತಿ ನೀಡುವುದು.

# ೬. ಯಕ್ಷಗಾನ

**ಪ್ರವೇಶ:** ತಾಯಿ ಹಕ್ಕಿ ಮತ್ತು ಮರಿ ಹಕ್ಕಿಗಳೆರಡು ಆಕಾಶದಲ್ಲಿ ಹಾರಾಡುತ್ತಾ... ತಾಯಿ ಹಕ್ಕಿಯು ನಮ್ಮ ರಾಜ್ಯದ ಕೆಲವು ಕಲಾ ವಿಶೇಷತೆಗಳ ಬಗ್ಗೆ ಮರಿ ಹಕ್ಕಿಗೆ ತಿಳಿಸುತ್ತಿದೆ...



@KTBS NOT TO BE REPUBLISHED

**ಮರಿ ಹಕ್ಕಿ:** ಅಮ್ಮಾ ಎಷ್ಟೊಂದು ಸುಂದರವಾಗಿದೆ! ನಮ್ಮ ಊರು.

**ತಾಯಿ ಹಕ್ಕಿ:** ಹೌದು ಮಗು. ಈ ಊರಿನ ವಿಶೇಷತೆಯೇ ಹಾಗೆ. ಇದು ಭೂಮಿಯ ಮೇಲಿನ ಸ್ವರ್ಗದ ಹಾಗೆ.

**ಮರಿ ಹಕ್ಕಿ:** ಅಮ್ಮ ಅಲ್ಲಿ ನೋಡು! ಅಷ್ಟೊಂದು ಜನ ಸೇರಿಕೊಂಡು ಅದೇನೋ ಮಾಡುತ್ತಿರುವ ಹಾಗೆ ಕಾಣಿಸುತ್ತಿದೆ.

**ತಾಯಿ ಹಕ್ಕಿ:** ಹೌದು ಮಗು. ಅದು ನಮ್ಮ ನಾಡಹಬ್ಬ ದಸರಾ. ಅಲ್ಲಿ ನಮ್ಮ ರಾಜ್ಯದ ಎಲ್ಲಾ ರೀತಿಯ ಕಲಾ ಪ್ರಕಾರಗಳನ್ನು ಪ್ರದರ್ಶನ ಮಾಡುತ್ತಾರೆ.

**ಮರಿ ಹಕ್ಕಿ:** ಏನಮ್ಮಾ ಇವೆಲ್ಲಾ?

**ತಾಯಿ ಹಕ್ಕಿ:** ನೋಡು ಮಗು ಇವೆಲ್ಲಾ ಕರಗ, ವೀರಗಾಸೆ, ಡೊಳ್ಳು ಕುಣಿತ, ಲಾವಣಿ, ಭರತನಾಟ್ಯ, ಯಕ್ಷಗಾನ ಮುಂತಾದ ಅನೇಕ ಕಲಾ ಪ್ರಕಾರಗಳನ್ನು ಇಲ್ಲಿ ಪ್ರದರ್ಶನ ಮಾಡುತ್ತಿದ್ದಾರೆ.

**ಮರಿ ಹಕ್ಕಿ:** ಅಮ್ಮ ನನಗೆ ಅವುಗಳ ಬಗ್ಗೆ ಸ್ವಲ್ಪ ಹೇಳಿಕೊಡುವೆಯಾ?

**ತಾಯಿ ಹಕ್ಕಿ:** ಆಯ್ತು ಮಗು. ಕರಾವಳಿ ಭಾಗದ ಅತ್ಯಂತ ವಿಶೇಷ ಮತ್ತು ಆಕರ್ಷಣೀಯವಾದ ಕಲೆ 'ಯಕ್ಷಗಾನ'ದ ಬಗ್ಗೆ ತಿಳಿಯೋಣ.

**ಹಕ್ಕಿಗಳು:** ಮಕ್ಕಳೇ.. ನೀವೂ ನಮ್ಮೊಂದಿಗೆ ಬನ್ನಿ.

## “ಆಟ ಆಟ ಒಂದೇ ಒಂದು ಆಟ
## ಬನ್ನಿ ಬನ್ನಿ ರಸಿಕರಿಗೆ ರಸದೂಟ”...

ಹರೀಶ, ಹರಿಣಿ, ಗಿರೀಶ ಎಲ್ಲರೂ ಮನೆಯ ಪಕ್ಕದ ರಸ್ತೆಯಲ್ಲಿ ಕೂಗುತ್ತಾ ಹೋದರು. ಅವರು ಕೂಗಿದ್ದನ್ನು ಕೇಳಿಸಿಕೊಂಡ ಸ್ವರೂಪ, ವಿನುತ ಎಲ್ಲರೂ ಅವರವರ ಪರಿಕರಗಳನ್ನು ತೆಗೆದುಕೊಂಡು ಊರಾಚೆಯ ಗೇರುಹಕ್ಕಲಿಗೆ ಹೋದರು. ಅಂದು ಶನಿವಾರ ಮಧ್ಯಾಹ್ನ ಶಾಲೆಗೆ ಬಿಡುವಿದ್ದ ಕಾರಣ, ಮಕ್ಕಳೆಲ್ಲ ಯಕ್ಷಗಾನ ಮಾಡಲು ತೀರ್ಮಾನಿಸಿದರು.

**ಯಕ್ಷಗಾನ:** ನೃತ್ಯ ಹಾಡುಗಾರಿಕೆ ಮಾತುಗಾರಿಕೆ ವೇಷಭೂಷಣಗಳನ್ನು ಒಳಗೊಂಡ ಶಾಸ್ತ್ರೀಯ ಕಲೆ. ಕರ್ನಾಟಕದ ಸಾಂಪ್ರದಾಯಿಕ ಕಲಾ ಪ್ರಕಾರಗಳಲ್ಲಿ ಅತ್ಯಂತ ಪ್ರಮುಖವಾದದ್ದು. ಕರಾವಳಿ, ಮಲೆನಾಡಿನ ಪ್ರದೇಶಗಳು ಹಾಗೂ ಕೇರಳದ ಕಾಸರಗೋಡಿನಲ್ಲಿ ಇದು ಹೆಚ್ಚು ಪ್ರಸಿದ್ಧ.

ಊರಿನಲ್ಲಿ ಅನೇಕ ಯಕ್ಷಗಾನ ಕಲಾವಿದರಿದ್ದರು. ಅವರಲ್ಲಿ ರಂಗಜ್ಜನಿಗೆ ಈಗಲೂ ಆಟ ಕುಣಿಯುವ ಹುಚ್ಚು. ಮಕ್ಕಳಿಗೆ ಕಲಿಸುವುದು ಅಂದರೆ ಅವರಿಗೆ ಅದೇನೋ ಹುಮ್ಮಸ್ಸು. ಅವರು ಎಲ್ಲರಿಗಿಂತ ಮೊದಲು ಬಂದು ನಾಲ್ಕು ಕಂಬ ಹುಗಿದು ಮಾವಿನ ತೋರಣ ಕಟ್ಟಿದರು. ಅದರ ಹಿಂದೆ ಹಳೆಯ ಸೀರೆಗಳನ್ನು ಕಟ್ಟಿ ಚೌಕಿ ಮನೆ ಮಾಡಿದ್ದರು. ಚೌಕಿ ಮನೆ ಎಂದರೆ ಬಣ್ಣದ ಮನೆ. ಅಲ್ಲಿ ಮಕ್ಕಳೆಲ್ಲ ಕುಳಿತು ಬಣ್ಣ ಬಳಿದುಕೊಳ್ಳಬೇಕು. ಆಯಾಯ ಪಾತ್ರಕ್ಕೆ ತಕ್ಕ ವೇಷ ಕಟ್ಟಿಕೊಳ್ಳಬೇಕು. ರಾಜವೇಷ, ಪುಂಡುವೇಷ, ರಾಕ್ಷಸ ವೇಷ, ಸ್ತ್ರೀವೇಷ, ಹಾಸ್ಯಗಾರ, ಋಷಿ ಮುನಿ... ಹೀಗೆ ಬೇರೆ ಬೇರೆ ವೇಷಗಳು ಇದ್ದವು.

**ಬಯಲಾಟ:** ಬಯಲಿನಲ್ಲಿ ನಡೆಯುವುದರಿಂದ ಇದಕ್ಕೆ ಬಯಲಾಟ ಎಂದು ಹೆಸರಿದೆ. ಬಯಲಾಟ ನಡೆಯುವ ಸ್ಥಳಕ್ಕೆ ರಂಗಸ್ಥಳ ಎನ್ನುವರು. ಇದನ್ನು ನಾಲ್ಕು ಕಂಬಗಳ ಸುಮಾರು ಹದಿನೈದು ಅಡಿಗಳಷ್ಟು ಚಚ್ಚೌಕದಲ್ಲಿ ಸಿದ್ಧಪಡಿಸಲಾಗುತ್ತದೆ.

**ಪರಿಕರ:** ವಸ್ತು, ಸಾಮಗ್ರಿ
**ಬಿಡುವು:** ವಿರಾಮ
**ಹುಮ್ಮಸ್ಸು:** ಉತ್ಸಾಹ
**ಪ್ರಕಾರ:** ವಿಧ
**ಹುಗಿದು:** ಹೂಳು



**ಭಾಗವತಿಕೆ:** ಯಕ್ಷಗಾನದಲ್ಲಿ ಹಾಡು ಹೇಳುವುದು.
**ನಾಂದೀಪದ್ಯ:** ಆರಂಭದ ಹಾಡು



**ಸಿದ್ಧತೆ:** ಹಿಂದೆ ಕೈ ದೀಪ ಗ್ಯಾಸ್ ಲೈಟಿನ ಬೆಳಕಿನಲ್ಲಿ ಆಟ ನಡೆಯುತ್ತಿತ್ತು. ಈಗ ವಿದ್ಯುತ್ ದೀಪಗಳ ಅನುಕೂಲ ಇದೆ. ರಂಗಸ್ಥಳದ ಹಿಂಬದಿಯಲ್ಲಿ ಹಿಮ್ಮೇಳದವರಿಗೆ ಕುಳಿತುಕೊಳ್ಳಲು ಏರ್ಪಾಡು ಇರುತ್ತದೆ. ಅದಕ್ಕಾಗಿ ಅಡಿಮಂಚ ಕಟ್ಟಿರುತ್ತಾರೆ. ಉಳಿದ ಮೂರು ಭಾಗಗಳಲ್ಲಿ ಪ್ರೇಕ್ಷಕರು ಕುಳಿತುಕೊಳ್ಳುತ್ತಾರೆ. ಆಟದ ಪ್ರಾರಂಭಕ್ಕೆ ಮೊದಲು ಭಟರು ವೇಷಭೂಷಣದಿಂದ ಸಾಗುತ್ತಾರೆ. ಬಯಲಾಟದಲ್ಲಿ ಹಾಡುವವರಿಗೆ ಭಾಗವತರು ಎಂದು ಹೆಸರಿದೆ. ಶ್ರುತಿ, ತಾಳ ಮತ್ತು ಚಂಡೆ ಇವು ಹಿಮ್ಮೇಳವಾದ್ಯಗಳಾಗಿರುತ್ತವೆ.

©KTBS NOT TO BE REPUBLISHED

ರಂಗಜ್ಜನದೆ ಅಂದಿನ ಭಾಗವತಿಕೆಯಾಗಿತ್ತು. ರವಿಯಣ್ಣ ಚಂಡೆ, ಮಂಜಣ್ಣ ಮದ್ದಳೆ ನುಡಿಸಲು ಒಪ್ಪಿದ್ದರು. ಆಟ ಆರಂಭವಾಯಿತು. ‘ಗಜಮುಖದವಗೆ ಗಣಪಗೆ ಆರತಿ ಎತ್ತಿರೆ’ ಎನ್ನುವ ನಾಂದೀ ಪದ್ಯವನ್ನು ಭಾಗವತರು ಹಾಡುತ್ತಿದ್ದರು. ಮಕ್ಕಳು ಬಾಲವೇಷ, ಸ್ತ್ರೀವೇಷ, ಪೀಠಿಕಾ ವೇಷ ಹೀಗೆ ಒಂದೊಂದೇ ರಂಗದಲ್ಲಿ ತಾಳಬದ್ಧವಾಗಿ ಕುಣಿದು ಮಾತನಾಡುತ್ತಿದ್ದರು. ವೇಷ ಭೂಷಣಗಳನ್ನು ಮಕ್ಕಳಿಗಾಗಿ ರಂಗಜ್ಜನೇ ಸಿದ್ಧಪಡಿಸಿದ್ದರು.

ಯಕ್ಷಗಾನದಲ್ಲಿ ತೆಂಕುತಿಟ್ಟು, ಬಡಗುತಿಟ್ಟು, ಬಡಾಬಡಗು ತಿಟ್ಟುಗಳು ಎಂಬ ಮೂರು ಪ್ರಕಾರಗಳಿವೆ. ವೇಷಭೂಷಣ, ವಾದನ, ಕುಣಿತ, ಅಭಿನಯಗಳು ಬೇರೆ ಬೇರೆ ಕ್ರಮದಲ್ಲಿ ಇರುತ್ತದೆ. ಅಂದು ರಾತ್ರಿ ಅದೇ ಊರಿನಲ್ಲಿ ಮೇಳದ ಆಟವೂ ಇತ್ತು. ಮಕ್ಕಳೆಲ್ಲ ಹಿರಿಯರೊಂದಿಗೆ ಯಕ್ಷಗಾನ ನೋಡಲು ಹೋಗಿದ್ದರು. ರಾತ್ರಿ ಇಡೀ ಆಟ ನೋಡಿ ಹಗಲೆಲ್ಲ ನಿದ್ದೆ ಮಾಡಿದರು.

ಮರುದಿನ ಬೆಳಗ್ಗೆ ಮಕ್ಕಳು ಎದ್ದಾಗ ಊರ ತುಂಬಾ ಕಲಾವಿದರ ಪಾತ್ರಗಳದ್ದೇ ಸುದ್ದಿ. ಹಾಸ್ಯಗಾರನ ಹಾಸ್ಯ ನೆನೆದು ನಗುವೋ! ನಗು ಊರಿಗೆ ಊರೇ ಹೊಟ್ಟೆ ಹುಣ್ಣಾಗುವಂತೆ ನಕ್ಕು ಸಂಭ್ರಮಿಸಿದ ದಿನ ಅದಾಗಿತ್ತು. ಯಕ್ಷಗಾನ ಎಂದರೆ ಹೀಗೆಯೇ. ನಾವೂ ಒಮ್ಮೆ ಯಕ್ಷಗಾನವನ್ನು ನೋಡೋಣ, ನಗೋಣ, ಅಭಿನಯಿಸೋಣ.

**ಆಟದ ಪ್ರಾರಂಭ:** ಆರಂಭದಲ್ಲಿ ಕೋಡಂಗಿ ಪಾತ್ರ ಪ್ರವೇಶಿಸುತ್ತದೆ. ನಂತರ ಮಲಗೋಪಾಲರು, ಒಂದೆರಡು ಗಂಟೆಯ ನಂತರ ಪೂರ್ವರಾಗದ ಅಥವಾ ಸಭಾ ಲಕ್ಷಣದ ಕಾರ್ಯಕ್ರಮವಾದ ಮೇಲೆ ಕಥೆ ಆರಂಭವಾಗುತ್ತದೆ. ಪಾತ್ರಧಾರಿಗಳು ತಮ್ಮ ಪಾತ್ರಕ್ಕೆ ತಕ್ಕಂತೆ ಕುಣಿಯುತ್ತಾರೆ. ಸಂಭಾಷಣೆ ಮಾಡುತ್ತಾರೆ. ಭಾಗವತರು ಹಾಡಿನ ಮೂಲಕ ಕಥೆಯನ್ನು ಬೆಳೆಸುತ್ತಾರೆ. ಬಯಲಾಟ ಇಡೀ ರಾತ್ರಿ ನಡೆಯುತ್ತದೆ.

**ಪಾತ್ರಗಳ ವೇಷಭೂಷಣ:** ಸಂಪ್ರದಾಯದಂತೆ ವಿವಿಧ ಬಣ್ಣ ಹಚ್ಚಿಕೊಂಡು, ಮರದ ಬೆಂಡಿನ ಆಭರಣಗಳನ್ನು ಧರಿಸಿ, ರಂಗು ರಂಗಿನ ಹೊಳೆಯುವ ಸುನೇರಿ ಕಾಗದ ಅಂಟಿಸಿ, ಗಾಜಿನ ತುಂಡು ಹಚ್ಚಿ ಹೊಳಪು ಕೊಡುತ್ತಾರೆ.

- **ಪಠ್ಯದಲ್ಲಿ ಗುರುತಿಸಿದ ಹೊಸಪದಗಳು ಯಾವುವು?**

NOT TO BE REPUBLISHED ©KTBS

## ೧. ವಾಕ್ಯ ತಿಳಿಯೋಣ.

ಮಾದರಿ:

| ವಾಕ್ಯ | ಪ್ರಶ್ನೆ | ಉತ್ತರ |
|---|---|---|
| ನಾವು **ಪರಿಕರ**ಗಳನ್ನು ಬಳಸುತ್ತೇವೆ. | ಯಾರು? | ನಾವು |
| | ಏನನ್ನು? | ಪರಿಕರಗಳನ್ನು |
| | ಮಾಡಿದರು? | ಬಳಸುತ್ತೇವೆ |

| ವಾಕ್ಯ | ಪ್ರಶ್ನೆ | ಉತ್ತರ |
|---|---|---|
| ರಾಜರು **ಬಹುಮಾನ**ಗಳನ್ನು ನೀಡಿದರು. | ಯಾರು? | |
| | ಏನನ್ನು? | |
| | ಮಾಡಿದರು? | |

| ವಾಕ್ಯ | ಪ್ರಶ್ನೆ | ಉತ್ತರ |
|---|---|---|
| ಮಕ್ಕಳು **ಸಿಹಿ**ಯನ್ನು ತಿಂದರು. | ಯಾರು? | |
| | ಏನನ್ನು? | |
| | ಮಾಡಿದರು? | |

| ವಾಕ್ಯ | ಪ್ರಶ್ನೆ | ಉತ್ತರ |
|---|---|---|
| ರಂಗಣ್ಣ **ನಾಟಕ**ವನ್ನು ಮಾಡಿದರು. | ಯಾರು? | |
| | ಏನನ್ನು? | |
| | ಮಾಡಿದರು? | |

@KTBS NOT TO BE REPUBLISHED

## ೨. ಗಟ್ಟಿಯಾಗಿ ಓದಿ, ಅರ್ಥ ವ್ಯತ್ಯಾಸ ತಿಳಿಯೋಣ.

| | |
|---|---|
| **ದನ:** ನಮ್ಮ ಮನೆಯ ಕೊಟ್ಟಿಗೆಯಲ್ಲಿ **ದನ** ಕಟ್ಟಿದೆ.<br>**ಧನ:** ಮನೆಯ ಪೆಟ್ಟಿಗೆಯಲ್ಲಿ **ಧನ** ಇಟ್ಟಿದೆ. | **ಸರ:** ಜಾನಕಿ **ಸರ**ವನ್ನು ಹಾಕಿದ್ದಾಳೆ.<br>**ಶರ:** ಏಕಲವ್ಯ **ಶರ**ವನ್ನು ಬಿಡುತ್ತಿದ್ದಾನೆ. |
| **ಅಕ್ಕಿ:** ತೊಳೆದು ಹರಡಿದ **ಅಕ್ಕಿ** ಆರುತ್ತಿದೆ.<br>**ಹಕ್ಕಿ:** ಆಕಾಶದಲ್ಲಿ **ಹಕ್ಕಿ** ಹಾರುತ್ತಿದೆ. | **ಗಂಟೆ:** ಹತ್ತು **ಗಂಟೆ** ಗೆ ಶಾಲೆಯು ಪ್ರಾರಂಭವಾಯಿತು.<br>**ಘಂಟೆ:** ಶಾಲೆಯ **ಘಂಟೆ** ಬಾರಿಸಿತು. |
| **ಶಶಿ:** ಚಂದ್ರನಿಗೆ **ಶಶಿ** ಎನ್ನುತ್ತಾರೆ.<br>**ಸಸಿ:** ಗಿಡಕ್ಕೆ **ಸಸಿ** ಎನ್ನುತ್ತಾರೆ. | **ಹಳೆ:** ರೈತ ಬೆಳೆದ ಭತ್ತ **ಹಳೆ**ಯದಾಗಿದೆ.<br>**ಅಳೆ:** ರೈತ ಬೆಳೆದ ಭತ್ತವನ್ನು **ಅಳೆ**ಯಲಾಗಿದೆ. |

## ೩. ನಾಲಿಗೆಗೆ ವ್ಯಾಯಾಮ ನೀಡೋಣ.



೧) ಸಂಪಂಗಪ್ಪನ ಮಗ ಮರಿ ಸಂಪಂಗಪ್ಪ
೨) ರೈಲು ಲಾರಿ ಲಾರಿ ರೈಲು
೩) ಕೆಂಪು ಕುಂಕುಮ ಕಪ್ಪು ಕುಂಕುಮ
೪) ಕಾಗೆ ಪುಕ್ಕ ಗುಬ್ಬಿ ಪುಕ್ಕ
೫) ತರೀಕೆರೆ ಏರಿ ಮೇಲೆ ಮೂರು ಕರಿ ಕುರಿಮರಿ ಮೇಯುತ್ತಿತ್ತು
೬) ಚರಕದ ಚಕ್ರ ಚಕ್ರದ ಚರಕ

ಹಿರಿಯರ ಸಹಾಯದೊಂದಿಗೆ ಇದೇ ಮಾದರಿಯ ನಾಲಿಗೆ ಸುರುಳಿಗಳನ್ನು ಸಂಗ್ರಹಿಸೋಣ.

೧. ______________________

೨. ______________________

೩. ______________________

## ೪. ಧ್ವನಿ ವ್ಯತ್ಯಾಸಗಳನ್ನು ಪತ್ತೆ ಹಚ್ಚಿ, ಇನ್ನಷ್ಟು ಪದಗಳನ್ನು ಬರೆಯೋಣ.

| | | |
|---|---|---|
| ರಜ – ರಾಜ | ಮಣಿ – ಮಾಣಿ | ಮನ – ಮಾನ |
| ಬಳೆ – ಬಾಳೆ | ದನ – ದಾನ | ಮರ – ಮಾರ |
| ಕಿರು – ಕೀರು | ಕುಡಿ – ಕೂಡಿ | ತೊಡು – ತೋಡು |
| | | |
| | | |
| | | |
| | | |

@KTBS
NOT TO BE REPUBLISHED

## ೫. ಪದ್ಯದಲ್ಲಿ ಒಂದೇ ಅಕ್ಷರದಿಂದ ಪ್ರಾರಂಭವಾಗುವ ಮತ್ತು ಕೊನೆಯಾಗುವ ಪದಗಳನ್ನು ಹುಡುಕೋಣ.

| ಒಂದೇ ಅಕ್ಷರದಿಂದ ಪ್ರಾರಂಭದ ಪದ | ಒಂದೇ ಅಕ್ಷರದಿಂದ ಕೊನೆಯಾಗುವ ಪದ |
|---|---|
| ಮಾದರಿ: ಅದಕ್ಕಾಗಿ, ಅನುಕೂಲ.... | ತೆಂಕು ತಿಟ್ಟು, ಬಡಗು ತಿಟ್ಟು.......... |

## ೬. ಈ ಹಾಸ್ಯ ಕವಿತೆಯನ್ನು ಮುಂದುವರೆಸೋಣ.




ಐದು ಜಾಣ ಮಂಗಗಳು
ಮರದಲ್ಲಿದ್ದವು।
ಮೇಲೆ ಹಾರಿ ಆಡಿ ಹಾಡಿ
ಕುಣಿಯುತ್ತಿದ್ದವು॥

ಮಂಗವೊಂದು ಮಂಗವನ್ನು
ದೂಡಿ ಬಿಟ್ಟಿತು।
ಮರದ ಮೇಲಿನಿಂದ ಮಂಗ
ಬಿದ್ದೇ ಬಿಟ್ಟಿತು॥

ನಾಲ್ಕು ಜಾಣ ಮಂಗಗಳು
ಆಡುತ್ತಿದ್ದವು।
ಒಂದು ಮಂಗ ಹಾರಿ ನೆರೆಯ
ಮರವನೇರಿತು॥

---------------------
---------------------
---------------------
---------------------

@KTBS NOT TO BE REPUBLISHED

## ೭. ಕಥೆಯನ್ನು ಗಟ್ಟಿಯಾಗಿ ಓದಿ ಹೇಳೋಣ.



ನರಿ ಎಂದಿನಂತೆ ಸಂಜೆ ತನ್ನ ಗುಹೆಯ ಬಳಿಗೆ ಬಂದಿತು.

ಗುಹೆಯ ಹತ್ತಿರ ಒಳಹೊಕ್ಕ ಹುಲಿಯ ಹೆಜ್ಜೆ ಗುರುತು ನೋಡಿತು.

ಆದರೆ ನರಿಗೆ ಹುಲಿ ಹೊರ ಬಂದ ಹೆಜ್ಜೆ ಗುರುತು ಕಾಣಲಿಲ್ಲ.

ಗುಹೆಯ ಒಳಗೆ ಹುಲಿ ಇದೆಯೇ? ಎಂದು ತಿಳಿಯಲು ಒಂದು ಉಪಾಯ ಹೂಡಿತು.

**ನರಿ:** "ಓ ಗುಹೆ ರಾಜನೇ, ಒಳಗೆ ಬರಬಹುದೇ?".

**ಹುಲಿ:** (ಬೇಟೆಯಾಡಲು ಆಗದ ವಯಸ್ಸಾದ ಹುಲಿಯೊಂದು ಗುಹೆಯೊಳಗೆ ಇತ್ತು.)

"ಬರಬಹುದು, ಬರಬಹುದು".

ಆ ಮಾತು ಕೇಳಿದ ನರಿಗೆ ಗುಹೆಯೊಳಗೆ ಹುಲಿ ಇರುವುದು ಖಚಿತವಾಯಿತು. ಕೂಡಲೇ ನರಿಯು ಅಲ್ಲಿಂದ ಓಡಿ ಹೋಯಿತು.

## ೮. ಹಿರಿಯರ ಸಹಾಯದಲ್ಲಿ ಹಾಸ್ಯ ಪದ್ಯವನ್ನು ಹಾಡಿ ಆನಂದಿಸೋಣ.

ಒಂದು ದಿನ ಪೆದ್ದನ ಹೆಂಡ್ತಿ ಶಾವಿಗೆ ಮಾಡಿದ್ಲು
ಯಾರು ನೋಡಬಾರದೆಂದು ಡಬ್ಬಕ್ಕೆ ಹಾಕಿದ್ಲು।
ಅಲ್ಲಿಂದ ಬಂದ ಪೆದ್ದ ತೆಗೆದು ನೋಡಿದ
ಹಾರ ಹಾರ ಹಾರ ಎಂದು ಕೊರಳಿಗೆ ಹಾಕಿದ॥

ಒಂದು ದಿನ ಪೆದ್ದನ ಹೆಂಡ್ತಿ ಲಾಡು ಮಾಡಿದ್ಲು
ಯಾರು ನೋಡಬಾರದೆಂದು ಡಬ್ಬಕ್ಕೆ ಹಾಕಿದ್ಲು।
ಅಲ್ಲಿಂದ ಬಂದ ಪೆದ್ದ ತೆಗೆದು ನೋಡಿದ
ಚೆಂಡು ಚೆಂಡು ಚೆಂಡು ಎಂದು ಆಟವಾಡಿದ॥

ಒಂದು ದಿನ ಪೆದ್ದನ ಹೆಂಡ್ತಿ ಕೋಡುಬಳೆ ಮಾಡಿದ್ಲು
ಯಾರು ನೋಡಬಾರದೆಂದು ಡಬ್ಬಕ್ಕೆ ಹಾಕಿದ್ಲು।
ಅಲ್ಲಿಂದ ಬಂದ ಪದ್ದೆ ತೆಗೆದು ನೋಡಿದ
ಬಳೆ ಬಳೆ ಬಳೆ ಎಂದು ಕೈಗೆ ಹಾಕಿದ॥

– (ಸಂಗ್ರಹ)

©KTBS NOT TO BE REPUBLISHED

## ೯. ಈ ಹಾಸ್ಯ ಕವಿತೆಯನ್ನು ರಾಗವಾಗಿ ಹಾಡೋಣ.

ತೋಟಕೆ ಹೋಗೋ ತಿಮ್ಮ
ತೋಳ ಬಂದಿತಮ್ಮ

ಹಸು ಮೇಯಿಸೋ ತಿಮ್ಮ
ಹಸು ಹಾದೀತಮ್ಮ

ಒಲೆ ಉರಿಸೋ ತಿಮ್ಮ
ಉರಿ ಸುಟ್ಟಿತಮ್ಮ

ಪಾಠ ಬರೆಯೋ ತಿಮ್ಮ
ಬಳಪ ಇಲ್ಲಾ ಅಮ್ಮಾ

ಕಾವಲಿ ತಾರೋ ತಿಮ್ಮ
ಕಾಲು ನೋವು ಅಮ್ಮ

ನೀರು ಸೇದೋ ತಿಮ್ಮ
ಕೈ ನೋವು ಅಮ್ಮ

ಹೂವು ಬಿಡಿಸೋ ತಿಮ್ಮ
ಹಾವು ಬಂದಿತಮ್ಮ

ಊಟಕೆ ಬಾರೋ ತಿಮ್ಮ
ಓಡಿ ಬಂದೆ ಅಮ್ಮಾ!

## ೧೦. 'ತೋಟ' ಎನ್ನುವ ಪದ ಕೇಳಿದ ತಕ್ಷಣ ಮನಸ್ಸಿಗೆ ಬರುವ ಪದಗಳನ್ನು ಪಟ್ಟಿ ಮಾಡೋಣ.




NOT TO BE REPUBLISHED
@KTBS

## ೧೧. ಈ ಹಾಸ್ಯ ಕಥೆಯನ್ನು ಓದಿ, ಸಹಪಾಠಿಗಳೊಂದಿಗೆ ಹಂಚಿಕೊಳ್ಳೋಣ.



ಸಿಂಧನೂರಿನಲ್ಲಿ ರಂಗಣ್ಣನೆಂಬ ಪೈಲ್ವಾನ ಇದ್ದನು. ಆತ ಆನೆಯಂತೆ ಬಲಶಾಲಿಯಾಗಿದ್ದನು. ಆದ್ದರಿಂದ ಆತನಿಗೆ ಜಂಭವೋ ಜಂಭ. ಹಾಗಾಗಿ ಆತನು ಜನರನ್ನು ಆಗಾಗ್ಗೆ ಕೀಟಲೆ ಮಾಡುತ್ತಿದ್ದನು. ಬಹಳ ಕಾಟಕೊಡುತ್ತಿದ್ದನು.



ಅದೇ ಊರಿನಲ್ಲಿ ರಾಹುಲನೆಂಬ ಒಬ್ಬ ಹುಡುಗನು ಇದ್ದನು. ಆತ ಪೈಲ್ವಾನ್ ರಂಗಣ್ಣನಿಗೆ ಹೇಗಾದರೂ ತಕ್ಕ ಪಾಠವನ್ನು ಕಲಿಸಲು ಯೋಚಿಸಿದನು. ಪೈಲ್ವಾನನ್ನು ಕರೆದು 'ತೆಂಗಿನ ಕಾಯಿಯನ್ನು ಕೊಡುವೆನು. ಮನೆ ಮೇಲಕ್ಕೆ ಎಸೆಯುವಿರಾ?' ಎಂದು ಕೇಳಿದನು. ಎಸೆದರೆ ನನಗೇನು ಕೊಡುವೆ ಎಂದನು ರಂಗಣ್ಣ. 'ನೂರು ರೂಪಾಯಿ ಕೊಡುವೆ, ಒಂದು ವೇಳೆ ಎಸೆಯದಿದ್ದರೆ, ನೀನು ಊರಿನವರ ತಂಟೆಗೆ ಬರಲೇಬಾರದು' ಎಂದನು ರಾಹುಲ.



ಆಗ ರಂಗಣ್ಣನು ತೆಂಗಿನ ಕಾಯಿಯನ್ನು 'ರೊಯ್ಯನೆ' ಎಸೆದನು. ಅದು ಅಲ್ಲಿದ್ದ ಎಲ್ಲಾ ಮನೆಗಳಿಗಿಂತಲೂ ಎತ್ತರಕ್ಕೆ ಹೋಯಿತು. 'ನೂರು ರೂಪಾಯಿ ಕೊಡು' ಎಂದನು. ಆಗ ರಾಹುಲನು 'ನೀವು ತೆಂಗಿನಕಾಯಿಯನ್ನು ಎಸೆದಿರಿ ನಿಜ. ಆದರೆ ನಾನು ಹೇಳಿದ್ದು ಹಾಗಲ್ಲ. ತೆಂಗಿನಕಾಯಿಯನ್ನು ಕೊಡುತ್ತೇನೆ. ಈ ಮನೆ ಮೇಲಕ್ಕೆ ಎಸೆಯಬಲ್ಲಿರಾ? ಎಂದು, ಆದರೆ ನೀವು ಮನೆಯನ್ನು ಮೇಲಕ್ಕೆ ಎಸೆಯಲಿಲ್ಲ. ಆದ್ದರಿಂದ ನೀವು ಸೋತಿರಿ, ಇನ್ನು ಮುಂದೆ ಊರವರ ತಂಟೆಗೆ ಎಂದಿಗೂ ಬರಬಾರದು' ಎಂದನು. ರಾಹುಲನ ಬುದ್ಧಿವಂತಿಕೆಗೆ ಸೋತ ಪೈಲ್ವಾನ್ ರಂಗಣ್ಣ ನಾಚಿಕೆಯಿಂದ ಮನೆಗೆ ಹೋದ.




NOT TO BE REPUBLISHED © KTBS

## ೧೨. ಪದಬಂಧ ತುಂಬೋಣ.

| | | | | | |
|---|---|---|---|---|---|
| | 1. | | | | |
| 2. | | | 3. | | 5. |
| | | | | | |
| | | | 4. | | |

**ಎಡದಿಂದ ಬಲಕ್ಕೆ: →**

2. ಕರಾವಳಿಯ ವಿಶೇಷ ಕಲೆ (4)
4. ಪಟ್ಟದಂತಹ ಊರು (3)

**ಮೇಲಿನಿಂದ ಕೆಳಕ್ಕೆ: ↓**

1. ಆಕಾಶದಲ್ಲಿ ಹೊಳೆಯುವ ಚುಕ್ಕಿ (3)
3. ಕಣ್ಣುಗಳಿಗೆ ಹೀಗೂ ಕರೆಯುತ್ತಾರೆ (3)
5. ನದಿಗಿಂತ ದೊಡ್ಡದು (3)

## ೧೩. ಒಗಟುಗಳನ್ನು ಬಿಡಿಸೋಣ.

ಹಸಿರು ಬಣ್ಣ ಸ್ವಲ್ಪ ಖಾರ,
ಸುಣ್ಣವಿದ್ದರೆ ಕೆಂಪು ತಾರ,
ಅಡಿಕೆ ಜೊತೆಗೆ ಮೆಲ್ಲು ಬಾರ
ನಾನು ಯಾರು?

ನೀರಿಲ್ಲದ ಬಾವಿ,
ಸಿಹಿಯಾದ ಬಾವಿ, ಹಬ್ಬದ
ಅಡುಗೆಗಳಲ್ಲಿ ತುಂಬಾ ಪ್ರಭಾವಿ,
ನಾನು ಯಾರು?



ಪ್ರಾಣಿಗಳಿಗೆ ತವರು ಮನೆ
ಗಿಡಮರಗಳ ನಿಜ ಖಜಾನೆ
ಹುಲಿ, ಸಿಂಹ, ಆನೆ, ಮನೆ
ನಾನು ಯಾರು?

ದೊಡ್ಡ ದೇಹ;
ಮೋಟು ಬಾಲ
ಕಣ್ಣು ಸಣ್ಣ; ಸಂಘಜೀವಿ
ನಾನು ಯಾರು ಗೊತ್ತೆ?

NOT TO BE REPUBLISHED @KTBS

ಹೀಗೆ ಮಾಡು :– ಹಿರಿಯರ ಸಹಾಯದಿಂದ ಒಗಟುಗಳನ್ನು ಸಂಗ್ರಹಿಸಿ, ಗೆಳೆಯರೊಂದಿಗೆ ಹಂಚಿಕೊ.

## ೧೪. ಚಿತ್ರಗಳನ್ನು ಗಮನಿಸಿ, ಚಿತ್ರಕ್ಕೆ ಹೊಂದುವ ಒಗಟು ರಚಿಸೋಣ.



ಬೂದು ಬಣ್ಣ, ಕಣ್ಣು ಸಣ್ಣ, ನೆಲಕೆ ಚಾಚಿದ ಮೂಗು

ಎಲ್ಲಕ್ಕಿಂತ ಹೆಚ್ಚು ತೂಕ ಹೊರುವೆ, ನಾನು ಯಾರು?



______________________

______________________

______________________



______________________

______________________

______________________



______________________

______________________

______________________

@KTBS
NOT TO BE REPUBLISHED

## ೧೫. ನಿಯೋಜಿತ ಕಾರ್ಯ

ನಮಗಿಷ್ಟವಾದ ಹಾಸ್ಯಮಯವಾದ ಕಥೆ, ಪದ್ಯ, ಒಗಟು ಮೊದಲಾದವುಗಳನ್ನು ಹಿರಿಯರ ಸಹಾಯದಿಂದ ಸಂಗ್ರಹಿಸಿ ಅಭ್ಯಾಸ ಮಾಡೋಣ.

@KTBS
NOT TO BE REPUBLISHED

## ೧೬. ಇದುವರೆಗೂ ಕಲಿತಿರುವ ಹೊಸ ಪದಗಳ ಉಕ್ತಲೇಖನವನ್ನು ತೆಗೆದುಕೊಳ್ಳೋಣ.

| ಕ್ರ.ಸಂ | ಪದಗಳು | ಕ್ರ.ಸಂ | ಪದಗಳು |
|---|---|---|---|
| 1. | | 11. | |
| 2. | | 12. | |
| 3. | | 13. | |
| 4. | | 14. | |
| 5. | | 15. | |
| 6. | | 16. | |
| 7. | | 17. | |
| 8. | | 18. | |
| 9. | | 19. | |
| 10. | | 20. | |

@KTBS
NOT TO BE REPUBLISHED

**ತಪ್ಪಾದ ಪದಗಳನ್ನು ಸರಿಪಡಿಸಿ ಬರೆಯೋಣ.**

| | |
|---|---|
| | |
| | |
| | |
| | |
| | |

★ ಸುಗಮಕಾರರು ಪಠ್ಯದಲ್ಲಿ ಕಲಿತ ಪದಗಳನ್ನು ಉಕ್ತಲೇಖನ ನೀಡಿ, ದೃಢೀಕರಿಸಿ, ಹಿಮ್ಮಾಹಿತಿ ನೀಡುವುದು.

# ೭. ಹೂವಾಡಗಿತ್ತಿ... (ಪದ್ಯ)

**ಪ್ರವೇಶ:**
ಕೆಂಪು ಬಣ್ಣ ಮುಳ್ಳು ಜೊತೆಗೆ
ಚಂದವಣ್ಣ ನಿನ್ನ ಮುಡಿಗೆ
ಗಿಡದಿ ಬಿಡುವ ಹೂವು ನಾನು ಯಾರು...?

ಉತ್ತರ :

**ನೀನು ನೋಡಿರುವ ಹೂವಿನ ಹೆಸರುಗಳನ್ನು ಪಟ್ಟಿಮಾಡು.**

______ ______ ______
______ ______ ______
______ ______ ______

**ಹೀಗೆ ಮಾಡು : ಶಾಲೆಯ ಕೈತೋಟದಲ್ಲಿ ಒಂದಷ್ಟು ಹೂವಿನ ಗಿಡಗಳನ್ನು ಬೆಳೆಸು.**

@KTBS NOT TO BE REPUBLISHED

ಹೂವನು ಮಾರುತ ಹೂವಾಡಗಿತ್ತಿ
ಹಾಡುವ ಬರುತಿಹಳು।
ಘಮಘಮ ಹೂಗಳು ಬೇಕೇ ಎನುತ
ಹಾಡುತ ಬರುತಿಹಳು॥

ಬಿಳುಪಿನ ಮಲ್ಲಿಗೆ ಹಳದಿಯ ಸಂಪಿಗೆ
ಹಸುರಿನ ಹೊಸ ಮರುಗ।
ಹಾಕಿ ಕಟ್ಟಿರುವೆ ಬೇಕೇ ಎನುತ
ಹಾಡುತ ಬರುತಿಹಳು॥

ಹೊಸ ಸೇವಂತಿಗೆ ಹೊಸ ಇರುವಂತಿಗೆ
ಅರಿಸಿನ ತಾಳೆಯಿದೆ।
ಅಚ್ಚ ಮಲ್ಲೆಯಲಿ ಪಚ್ಚೆತೆನೆಗಳು
ಸೇರಿದ ಮಾಲೆಯಿದೆ॥

**ಪದ–ಪದಗಳ ಅರ್ಥ**

| | | |
|---|---|---|
| ಹೂವಾಡಗಿತ್ತಿ | – | ಹೂ ಮಾರುವವಳು |
| ಅರಿಸಿನ | – | ಹಳದಿ ಬಣ್ಣದ |
| ಅಚ್ಚ | – | ದಟ್ಟ, ಗಾಢ |
| ಕಂಪು | – | ಸುವಾಸನೆ |
| ಬಿಳುಪಿನ | – | ಬಿಳಿ ಬಣ್ಣದ |
| ಮಾಲೆ | – | ಹಾರ |

ಕಂಪನು ಚೆಲ್ಲುವ ಕೆಂಪು ಗುಲಾಬಿ
ಅರಳಿದ ಹೊಸ ಕಮಲ।
ಬಿಳುಪಿನ ಜಾಜಿ ಹಳದಿಯ ಜಾಜಿ
ಅರಳಿದ ಬಿಳಿ ಕಮಲ॥

ಹಾಕಿ ಕಟ್ಟಿರುವೆ ಬೇಕೆ ಎನುತ
ಹಾಡುತ ಬರುತಿಹಳು।
ಹೂವನು ಮಾರುತ ಹೂವಾಡಗಿತ್ತಿ
ಹಾಡುತ ಬರುತಿಹಳು॥ – ಸಂಗ್ರಹ

**ಹೀಗೆ ಮಾಡು : ಪದ್ಯವನ್ನು ಗೆಳೆಯರೊಂದಿಗೆ ಹಾಡಿ ಅಭಿನಯಿಸಿ ಆನಂದಿಸು.**

## ೧. ಈ ಹೂಗಳ ಬಗ್ಗೆ ತರಗತಿಯಲ್ಲಿ ಚರ್ಚಿಸಿ ಬರೆಯೋಣ.

| ಚಿತ್ರ | ಹೂವಿನ ಹೆಸರು |
|---|---|
|  | |
|  | |
|  | |
|  | |
|  | |

@KTBS NOT TO BE REPUBLISHED

## ೨. ಚಿತ್ರವನ್ನು ಗಮನಿಸಿ ಇದರ ಬಗ್ಗೆ ಮಾತನಾಡೋಣ.

| | |
|---|---|
|  | |

## ೩. ಈ ರೀತಿಯ ಹೂವಿನ ಅಲಂಕಾರಗಳನ್ನು ಎಲ್ಲೆಲ್ಲಿ ನೋಡಿರುವೆ? ವಿವರಿಸು.



## ೪. ಮಾದರಿಯನ್ನು ಗಮನಿಸಿ ಸೂಕ್ತ ಪದಗಳನ್ನು ಬರೆಯೋಣ. ಹೊಸದನ್ನು ಸೇರಿಸೋಣ

© KTBS NOT TO BE REPUBLISHED

| | | |
|---|---|---|
| ಮಾದರಿ: | ಹೂಗಳನ್ನು ಮಾರುವವಳು | ಹೂವಾಡಗಿತ್ತಿ |
| ೧. | ಮದುವೆಗೆ ಸಿಂಗರಿಸಿಕೊಂಡವಳು | |
| ೨. | ............................................. ? | ................................... ? |

**ಹೀಗೆ ಮಾಡು :** ಹೂವು ಹೇಗೆಲ್ಲಾ ಬಳಕೆಯಾಗುತ್ತಿದೆ ಎಂಬುದನ್ನು ಹಿರಿಯರಿಂದ ಕೇಳಿ ತಿಳಿ.

## ೫. ಕಥೆಯನ್ನು ಓದಿ ಅದರ ಮುಖ್ಯಾಂಶ (ತಿರುಳು) ಹೇಳೋಣ ಮತ್ತು ಬರೆಯೋಣ.




ಒಂದು ಕಾಡಿನಲ್ಲಿ ಆನೆಯೊಂದು ಸಿಕ್ಕ ಸಿಕ್ಕ ಪ್ರಾಣಿಗಳನ್ನು ಕೊಲ್ಲುತ್ತಿತ್ತು. ಆನೆಗೆ ಸಿಕ್ಕಿ ಅನೇಕ ಪ್ರಾಣಿಗಳು ಪ್ರಾಣ ಕಳೆದುಕೊಂಡವು. ಆಗ ಪ್ರಾಣಿಗಳೆಲ್ಲಾ ಸಭೆ ಸೇರಿ ಆನೆಯ ಹಾವಳಿಯಿಂದ ಪಾರಾಗಲು ಒಂದು ಉಪಾಯವನ್ನು ಮಾಡಿದವು. ಪ್ರಾಣಿಗಳೆಲ್ಲಾ ಒಂದಾಗಿ ಆನೆಯ ಬಳಿ ಬಂದು "ನೀನೆ ಕಾಡಿನ ರಾಜನಾಗಬೇಕು" ಎಂದು ಕೇಳಿಕೊಂಡವು. ಆನೆ ಒಪ್ಪಿತು. ಮೊದಲೆ ಒಂದು ಸ್ಥಳದಲ್ಲಿ ಕೆಸರಿನ ದೊಡ್ಡ ಹೊಂಡವನ್ನು ಮಾಡಿದ್ದವು. ಆ ಹೊಂಡದ ಮೇಲೆ ಮರದ ರೆಂಬೆ ಕೊಂಬೆಗಳನ್ನೆಲ್ಲಾ ಹಾಕಿ ಮರೆ ಮಾಡಿದ್ದವು. ಮರದಿಂದ ಸಿಂಹಾಸನವನ್ನು ಮಾಡಿಟ್ಟು ಆನೆಯನ್ನು ಪಟ್ಟಾಭಿಷೇಕಕ್ಕಾಗಿ ಕರೆತಂದವು.

ಪ್ರಾಣಿಗಳ ಈ ತಂತ್ರ ಅರಿಯದ ಆನೆಯು ಗಂಭೀರವಾಗಿ ಆ ಸ್ಥಳಕ್ಕೆ ಹೋಯಿತು. ಮುಚ್ಚಿಟ್ಟಿದ್ದ ಕೆಸರಿನ ಹೊಂಡದಲ್ಲಿ ಆನೆಯು ಬಿದ್ದಿತು. ಕೆಸರಿನಲ್ಲಿ ಸಿಕ್ಕಿಕೊಂಡ ಆನೆಯು ಹೊರಕ್ಕೆ ಬರಲಾಗದೆ ಹಸಿವಿನಿಂದ ಒದ್ದಾಡಿ ಕೊನೆಗೆ ಎಲ್ಲಾ ಪ್ರಾಣಿಗಳನ್ನು ಬೇಡಿಕೊಂಡಿತು. ನನ್ನನ್ನು ಉಳಿಸಿ, ನಾನು ನಿಮಗೆ ಎಂದಿಗೂ ತೊಂದರೆ ಕೊಡುವುದಿಲ್ಲ ಎಂದು ಮಾತುಕೊಟ್ಟಿತು. ಎಲ್ಲಾ ಪ್ರಾಣಿಗಳು ಸೇರಿ ಆನೆಯನ್ನು ಗುಂಡಿಯಿಂದ ಹೊರತಂದವು. ಅಂದಿನಿಂದ ಎಲ್ಲಾ ಪ್ರಾಣಿಗಳು ಸಂತಸದಿಂದ ಒಟ್ಟಿಗೆ ಬಾಳಿದವು.

**ಮುಖ್ಯಾಂಶ :**

______________________________________________

______________________________________________

______________________________________________

______________________________________________

______________________________________________

______________________________________________

@KTBS NOT TO BE REPUBLISHED

## ೬. ತರಗತಿಯಲ್ಲಿನ ಸನ್ನಿವೇಶ ಗಮನಿಸಿ, ಆಕರ್ಷಕ ಸೂಚನೆಯನ್ನು ಹಾಕಲು ಸಹಕರಿಸೋಣ.

ಅಂದು ಶಿಕ್ಷಕರು ಪರಿಸರ ಅಧ್ಯಯನದ ನೀರಿನಲ್ಲಿ ತೇಲುವ, ಮುಳುಗುವ ವಸ್ತುಗಳ ಕುರಿತು ಪ್ರಯೋಗ ಮಾಡಲು ಅಗತ್ಯ ಸಾಮಗ್ರಿಗಳನ್ನು ಸಿದ್ಧಪಡಿಸಿಕೊಂಡು ಬಂದಿದ್ದರು. ನನಗಂತೂ ಪ್ರಯೋಗಗಳೆಂದರೆ ಬಹಳ ಕುತೂಹಲ. ನನಗೆ ಅಷ್ಟು ತೂಕವಿರುವ ತೆಂಗಿನಕಾಯಿ ನದಿಯಲ್ಲಿ ಹೇಗೆ ತೇಲಿ ಬರುತ್ತದೆ? ಎಂಬುದನ್ನು ತಿಳಿಯಬೇಕಿತ್ತು.

ಆದರೆ ಕುತೂಹಲಕ್ಕೆ ಎಲ್ಲರೂ ಗುಂಪಾಗಿ ಒಬ್ಬರ ಮೇಲೆ ಒಬ್ಬರು ಬೀಳತೊಡಗಿದರು. ಶಿಕ್ಷಕರು ಎಷ್ಟೇ ಪ್ರಯತ್ನಿಸಿದರೂ ಮಕ್ಕಳ ಗಲಾಟೆಯನ್ನು ನಿಯಂತ್ರಿಸಲು ಸಾಧ್ಯವಾಗಲೇ ಇಲ್ಲ. ಪ್ರಯೋಗಕ್ಕೆ ತಂದಿದ್ದ ವಸ್ತುಗಳು ಹಾಳಾದವು. ಆದ್ದರಿಂದ ಪ್ರಯೋಗ ನಡೆಯದೆ ನನಗೆ ನಿರಾಸೆಯಾಯಿತು.

ನಾನು ಯೋಚಿಸುತ್ತಿದ್ದೇನೆ! ಇನ್ನು ಮುಂದೆ ತರಗತಿ ನಡೆಯುವಾಗ ಎಲ್ಲರೂ ನಿಶ್ಯಬ್ದವಾಗಿ ಭಾಗವಹಿಸಬೇಕು. ಸರದಿಯಂತೆ ಭಾಗವಹಿಸುವುದು ಹಾಗೂ ಮಾತುಕತೆ ನಡೆಸುತ್ತಾ ಕಲಿಕೆಯಲ್ಲಿ ತೊಡಗುವಂತೆ ಆಗಬೇಕು. ಅದಕ್ಕಾಗಿ ನಾನು ಶಿಕ್ಷಕರಿಗೆ ಸಹಾಯ ಮಾಡಬೇಕು.

**ನಾವು ಅವರಿಗೆ ಸಹಾಯ ಮಾಡೋಣ...**

**ಉದಾ:** "ನಿಶಬ್ಧವಾಗಿರಿ"  – ನಿಶಬ್ಧತೆ ಕಾಪಾಡಿ

@KTBS
NOT TO BE REPUBLISHED

"ಸರದಿಯನ್ನು ಅನುಸರಿಸಿ" ಎಂಬುದನ್ನು ಹೇಳಲು ಚಿತ್ರ ಅಥವಾ ಬರೆಹದ ಮೂಲಕ ಸೂಚನೆ ನೀಡೋಣ.

## ೭. ಸೂಚನೆಗಳನ್ನು ಬರೆಯೋಣ.

ಶಾಲಾ ಕೈತೋಟವು ಸಾಕಷ್ಟು ಹರಿದ ಹಾಳೆಗಳು, ಬಳಸಿದ ವಸ್ತುಗಳ ಚೂರುಗಳು, ಕಸಕಡ್ಡಿಗಳಿಂದ ತುಂಬಿಹೋಗಿದೆ.




ಶಾಲಾ ಶುಚಿತ್ವ ಕಾಪಾಡಲು ನಾವು ಒಂದು ಸೂಚನಾ ಫಲಕ ಹಾಕೋಣ.

## ೮. ಘಟನೆಯನ್ನು ಓದಿ ನಮ್ಮದೇ ಶೈಲಿಯಲ್ಲಿ ಪ್ರಶಂಸೆ ಮಾಡೋಣ.

ನನಗೆ ನಾಯಿ ಮರಿಗಳೆಂದರೆ ಪ್ರಾಣ. ನನ್ನ ತಂದೆಗೆ ಅನೇಕ ಬಾರಿ ನಾಯಿ ಮರಿಯನ್ನು ತಂದು ಕೊಡುವಂತೆ ಕೇಳಿದಾಗ 'ನಾವು ಬಾಡಿಗೆ ಮನೆಯಲ್ಲಿ ಇರುವ ಕಾರಣ ನಾಯಿ ಸಾಕುವುದು ಬೇಡ' ಎಂದು ಹೇಳಿದರು. ಬದಲಾಗಿ ನಮ್ಮ ಬೀದಿಯಲ್ಲಿ ಇರುವ ನಾಯಿಗಳನ್ನೇ ನಮ್ಮ ನಾಯಿಗಳೆಂದು ಭಾವಿಸಿ ಆರೈಕೆ ಮಾಡಲು ತಿಳಿಸಿದರು.

ಅಂದಿನಿಂದ ನಾಯಿಗಳು ಎಲ್ಲಿ ಕಂಡರೂ, ಅವುಗಳಿಗೆ ತೊಂದರೆ ಆಗದಂತೆ ನೋಡಿಕೊಳ್ಳುತ್ತಿದ್ದೆ. ಆಹಾರ ಕೊಡುತ್ತಿದ್ದೆ. ಹೀಗಿರುವಾಗ ನನ್ನ ಮನೆಯ ರಸ್ತೆ ಬದಿಯಲ್ಲಿ ಒಂದು ನಾಯಿ ನಾಲ್ಕು ಮರಿಗಳಿಗೆ ಜನ್ಮ ನೀಡಿತ್ತು. ದಿನಾಲೂ ಅವುಗಳಿಗೆ ಹಾಲು ಕೊಡುವುದು, ಅದರ ತಾಯಿಗೆ ಆಹಾರ ಕೊಡುವುದರ ಮೂಲಕ ಖುಷಿ ಪಡುತ್ತಿದ್ದೆ.

ಒಂದು ದಿನ ಯಾರೋ ಎರಡು ಮರಿಗಳನ್ನು ಎತ್ತಿಕೊಂಡು ಹೋಗಿ ಒಂದು ಹಳೆ ಮನೆಯ ಜಾಗದಲ್ಲಿ ಅವುಗಳ ಕುತ್ತಿಗೆಗೆ ಹಗ್ಗವನ್ನು ಕಟ್ಟಿ ಬಿಟ್ಟು ಹೋಗಿದ್ದರು. ಅದನ್ನು ಗಮನಿಸಿದ ಕೂಡಲೇ ನನ್ನ ತಂದೆಗೆ ಫೋನ್ ಮಾಡಿ ಬೇಗನೆ ಬಂದು ಆ ಮರಿಗಳನ್ನು ರಕ್ಷಿಸಲು ಸಹಾಯ ಮಾಡುವಂತೆ ಕೇಳಿದೆ.

ಇಬ್ಬರು ಸೇರಿ ಒದ್ದಾಡುತ್ತಿದ್ದ ಮರಿಗಳನ್ನು ರಕ್ಷಿಸಿ, ಪಶುವೈದ್ಯರಿಂದ ಚಿಕಿತ್ಸೆ ಕೊಡಿಸಿದೆವು. ನಂತರ ಮರಳಿ ಅವುಗಳ ತಾಯಿಯ ಬಳಿಗೆ ಬಿಟ್ಟೆವು. ಮರಿಗಳು ಮತ್ತೆ ತನ್ನ ತಾಯಿಯ ಮಡಿಲು ಸೇರಿದೊಡನೆ ತಾಯಿ ಮರಿಗಳನ್ನು ಮುದ್ದಾಡತೊಡಗಿತು. ಎಲ್ಲಾ ಮರಿಗಳು ಬೆರೆತು ಖುಷಿಯಿಂದ ಸಂಭ್ರಮಿಸುವುದನ್ನು ಕಂಡು ನನ್ನ ಕಣ್ಣಂಚಿನಲ್ಲಿ ಸಂತೋಷದ ಕಣ್ಣೀರು ಬಂದಿತು. ಸಹಾಯ ಮಾಡಿದ್ದಕ್ಕಾಗಿ ನನ್ನ ತಂದೆಗೆ ಧನ್ಯವಾದಗಳನ್ನು ಹೇಳಿದೆನು. "ಒಳ್ಳೆಯ ಕೆಲಸ ಮಾಡಿದೆ ಮಗು. ಕಷ್ಟದಲ್ಲಿರುವವರಿಗೆ ಸಹಾಯ ಮಾಡಬೇಕು" ಎಂದು ಹೇಳಿ ಅಪ್ಪ ಬೆನ್ನು ತಟ್ಟಿದರು.

©KTBS NOT TO BE REPUBLISHED

### ✦ ಗೆಳೆಯರೊಂದಿಗೆ ಚರ್ಚಿಸಿ, ಮೂವರು ಗೆಳೆಯರ ಅಭಿಪ್ರಾಯಗಳನ್ನು ಬರೆಯೋಣ.

| | |
|---|---|
| ನನ್ನ ಅಭಿಪ್ರಾಯ | |
| ಗೆಳೆಯ–೧ | |
| ಗೆಳೆಯ–೨ | |
| ಗೆಳೆಯ–೩ | |

✦ ಇತರರಿಗೆ ಸಹಾಯ ಮಾಡಿದ ಸಂದರ್ಭವನ್ನು ನಾಲ್ಕರಿಂದ ಐದು ವಾಕ್ಯಗಳಲ್ಲಿ ಬರೆಯೋಣ.

## ೯. ಈ ಸನ್ನಿವೇಶ ಓದಿ, ಪೇಪರ್‌ದೋಣಿ ತಯಾರಿಸಿ, ಆಟವಾಡೋಣ.

ಮಳೆಗಾಲದ ಒಂದು ಭಾನುವಾರ. ಗೆಳೆಯರು ಊರಿನ ಪಕ್ಕದಲ್ಲೇ ಇದ್ದ ಆಟದ ಮೈದಾನದ ಬಳಿಗೆ ಹೋದರು. 'ಲಗೋರಿ' ಆಟವಾಡುತ್ತಿರುವಾಗ ಪಟಪಟನೆ ಜೋರುಮಳೆ ಬಂತು. ಎಲ್ಲರೂ ಮರದ ಕೆಳಗೆ ನಿಂತರು.

ನೋಡು ನೋಡುತ್ತಲೇ, ಫಳಫಳ ಎಂದು ಮಿಂಚು! ಗುಡುಗು ಗುಡುಗುಡು ಎಂದು ಗುಡುಗಿತು! ಒಮ್ಮೆಲೇ ಜೋರು ಮಳೆ ಬಂದು ಥಟ್ಟನೆ ನಿಂತಿತು. ಮೈದಾನದ ತುಂಬೆಲ್ಲಾ ನೀರು. ಲಗೋರಿ ಮುಂದುವರಿಸಲು ಆಗುತ್ತಿರಲಿಲ್ಲ. ಬದಲಿಗೆ ಪೇಪರ್ ದೋಣಿ ಆಟವಾಡಲು ತೀರ್ಮಾನಿಸಿದರು.ಆಟವಾಡುವಾಗ ಹಸಿವಾದರೆ ತಿನ್ನಲು ತಿಂಡಿ ಕಟ್ಟಿಕೊಂಡು ಬಂದಿದ್ದ ಪೇಪರ್‌ಗಳನ್ನೇ ಬಳಸಿ ದೋಣಿ ತಯಾರಿಸಿದ್ದಾರೆ. ಅವುಗಳ ಮಾದರಿಗಳನ್ನು ಮುಂದಿನ ಪುಟದಲ್ಲಿ ನೀಡಲಾಗಿದೆ.ಗಮನಿಸಿ ನೀನು ತಯಾರಿಸಿ ಆನಂದಿಸು.

✦ ಮಳೆಯಲ್ಲಿ ನೆನೆದು ಬಂದ ಸನ್ನಿವೇಶದ ಬಗ್ಗೆ ಮಾತನಾಡೋಣ ಮತ್ತು ಬರೆಯೋಣ.

©KTBS NOT TO BE REPUBLISHED

✦ ಮಳೆಯ ಯಾವುದಾದರೊಂದು ಸನ್ನಿವೇಶವನ್ನು ನೆನೆದು ಅದಕ್ಕೊಂದು ಚಿತ್ರ ಬರೆಯೋಣ.

## ೧೦. ಆಲಿಸಿ–ಪಾಲಿಸೋಣ.

@KTBS NOT TO BE REPUBLISHED



ಈ ಸಾಮಗ್ರಿಗಳನ್ನು ಬಳಸಿ ತಯಾರಿಸಿರುವ ಅಡುಗೆ ಯಾವುದಿರಬಹುದು?

______________________________

## ೧೧. ಸೂಚನೆ ಪಾಲಿಸಿ ಚಿತ್ರ ರಚಿಸೋಣ.

- ಒಂದು ದೊಡ್ಡ ವೃತ್ತ ಹಾಕೋಣ.
- ವೃತ್ತದ ಒಳಗೆ ಮಧ್ಯಕ್ಕಿಂತ ಸ್ವಲ್ಪ ಮೇಲೆ ಎರಡೂ ಬದಿಗಳಲ್ಲಿ 2 ಸಣ್ಣ ವೃತ್ತಗಳನ್ನು ಹಾಕೋಣ.
- ಮಧ್ಯದಲ್ಲಿರುವ ಎರಡು ಸಣ್ಣ ವೃತ್ತಗಳ ನಡುವೆ ಸ್ವಲ್ಪ ಕೆಳಭಾಗದಲ್ಲಿ ಸಣ್ಣ ತ್ರಿಭುಜ ಬರೆಯೋಣ.
- ಈಗ ತ್ರಿಭುಜದ ಕೆಳಗೆ ಮೇಲ್ಮುಖವಾಗಿ ಅರ್ಧ ವೃತ್ತಾಕಾರವನ್ನು ಎಳೆಯೋಣ.
- ಈಗ ವೃತ್ತದ ಮೇಲಿನ ಎರಡೂ ಬದಿ ಹಾಗೂ ಕೆಳಗಿನ ಎರಡೂ ಬದಿಗಳಿಗೆ ಓರೆಯಾಗಿ 4 ಚೂಪಾದ ಸಣ್ಣ ಎಲೆಗಳ ಚಿತ್ರ ಬರೆಯೋಣ.
- ಈಗ ದೊಡ್ಡ ವೃತ್ತಕ್ಕೆ ಅಂಟಿಕೊಂಡಂತೆ ಕೆಳಭಾಗದಲ್ಲಿ ಅದೇ ಗಾತ್ರದ ಮತ್ತೊಂದು ವೃತ್ತ ಹಾಕಿ, ಅದರ ಕೆಳಗೆ ಓರೆಯಾಗಿ ಎಡಕ್ಕೆ ಮತ್ತು ಬಲಕ್ಕೆ ಇನ್ನೆರಡು ಎಲೆಗಳನ್ನು ಅಂಟಿಸೋಣ.
- ಈಗ ರಚಿಸಿರುವ ಚಿತ್ರಕ್ಕೆ ಹೆಸರು ಕೊಡೋಣ.

@KTBS
NOT TO BE REPUBLISHED

**ಚಿತ್ರದ ಹೆಸರು :** ____________________

## ೧೨. ಯೋಜನಾ ಕಾರ್ಯ :

✦ ನಮ್ಮ ಸುತ್ತಮುತ್ತ ಗಮನಿಸುವ ಸೂಚನೆಗಳನ್ನು ಬರೆಯೋಣ.

| ಕ್ರಮ ಸಂಖ್ಯೆ | ಸೂಚನೆಗಳು | ಎಲ್ಲಿ ಬರೆಯಲಾಗಿತ್ತು? |
|---|---|---|
| ೧. | | |
| ೨. | | |
| ೩. | | |
| ೪. | | |

✦ ಯಾವುದಾದರೊಂದು ಕಥನ ಕವನಗಳ ಚಿತ್ರ ಸರಣಿಗಳನ್ನು ಸಂಗ್ರಹಿಸಿ ಅಂಟಿಸೋಣ.

@KTBS
NOT TO BE REPUBLISHED

## ೧೩. ಇದುವರೆಗೂ ಕಲಿತಿರುವ ಹೊಸ ಪದಗಳ ಉಕ್ತಲೇಖನವನ್ನು ತೆಗೆದುಕೊಳ್ಳೋಣ.

| ಕ್ರ.ಸಂ | ಪದಗಳು | ಕ್ರ.ಸಂ | ಪದಗಳು |
|---|---|---|---|
| 1. | | 11. | |
| 2. | | 12. | |
| 3. | | 13. | |
| 4. | | 14. | |
| 5. | | 15. | |
| 6. | | 16. | |
| 7. | | 17. | |
| 8. | | 18. | |
| 9. | | 19. | |
| 10. | | 20. | |

@KTBS NOT TO BE REPUBLISHED

**ತಪ್ಪಾದ ಪದಗಳನ್ನು ಸರಿಪಡಿಸಿ ಬರೆಯೋಣ.**

| | |
|---|---|
| | |
| | |
| | |
| | |
| | |

★ ಸುಗಮಕಾರರು ಪಠ್ಯದಲ್ಲಿ ಕಲಿತ ಪದಗಳನ್ನು ಉಕ್ತಲೇಖನ ನೀಡಿ, ದೃಢೀಕರಿಸಿ, ಹಿಮ್ಮಾಹಿತಿ ನೀಡುವುದು.

# ೮. ನಮ್ಮ ಶಾಲಾ ಪತ್ರಿಕೆ

**ಪ್ರವೇಶ: ತೆಂಗಿನ ಕಾಯಿ ಚಿಪ್ಪು ಬಳಸಿ, ಆಟಿಕೆ ರಚಿಸೋಣ.**

**ಬೇಕಾಗುವ ಸಾಮಗ್ರಿಗಳು:** ತೆಂಗಿನ ಕಾಯಿ ಚಿಪ್ಪು, ಬಣ್ಣ, ಅಂಟು, ದಾರ, ಕಡ್ಡಿಗಳು.

**ವಿಧಾನ:** ತೆಂಗಿನ ಚಿಪ್ಪುಗಳನ್ನು ಆಟಿಕೆ ರಚಿಸಲು ಬೇಕಾದ ರೀತಿಯಲ್ಲಿ ಸಿದ್ಧಪಡಿಸಿಕೊಳ್ಳೋಣ. ಸೂಕ್ತವಾದ ಬಣ್ಣಗಳನ್ನು ಬಳಸಿ ವಿವಿಧ ಆಟಿಕೆಗಳನ್ನು ರಚಿಸೋಣ.













©KTBS NOT TO BE REPUBLISHED

**ಮಾಡಿ ನೋಡು:** ಇದೇ ರೀತಿಯಲ್ಲಿ ಕರಟದಿಂದ ವಿವಿಧ ಆಟಿಕೆಗಳನ್ನು ತಯಾರಿಸಿ, ತರಗತಿಯನ್ನು ಅಲಂಕರಿಸು.

# ಚಿಣ್ಣರ ಮಾದರಿ ಪತ್ರಿಕೆ



ಆಹಾ... ಎಷ್ಟೊಂದು ಸುಲಭ..!

ಸುಲಭವಾದ ವಿಧಾನಗಳು ತಂತ್ರಗಳ ಮೂಲಕ ಸುಂದರ ಚಿತ್ರರಚನೆ ಸಾಧ್ಯ. ಪ್ರಯತ್ನಿಸಿ.

ಸಿಂಹ



“ಮಕ್ಕಳಿಗೆ ಮೊದಲು ಚಿತ್ರ ಮಾಡಲು ಕಲಿಸಿ, ಬಳಿಕ ಅಕ್ಷರ ಕಲಿಸಿ. ಅದರಿಂದ ಹಸ್ತಾಕ್ಷರ ಸುಂದರವಾಗುವುದು”

• ಮಹಾತ್ಮ ಗಾಂಧಿ

## ಬುದ್ಧಿಗೊಂದು ಗುದ್ದು

• ರಂಧ್ರಗಳಿಲ್ಲದ ಮಡಕೆಯನ್ನು ನೀರು ತುಂಬುತ್ತಿರುವ ನಲ್ಲಿಯ ಕೆಳಗಡೆ ಎಷ್ಟು ಹೊತ್ತು ಇಟ್ಟರೂ ಅದು ತುಂಬುವುದಿಲ್ಲ. ಇದಕ್ಕೇನು ಕಾರಣ?

• ಎರಡು ವರ್ಷಗಳ ನಂತರ ನನ್ನ ಮಗನ ವಯಸ್ಸು ಈಗಿನ ವಯಸ್ಸಿನ ಎರಡು ಪಟ್ಟು ಆಗುತ್ತದೆ. ನಾಲ್ಕು ವರ್ಷಗಳ ನಂತರ ನನ್ನ ಮಗನ ವಯಸ್ಸು ಈಗಿನ ವಯಸ್ಸಿನ ಮೂರು ಪಟ್ಟಾಗುತ್ತದೆ. ಹಾಗಾದರೆ ಯಾರು ದೊಡ್ಡವರು? ಮಗನೇ? ಮಗಳೇ?



ಪ್ರೀತಿಯ ಪ್ರವೀಣ್, ‘ಕೆನರಾ ಕಿಡ್ಸ್, ಬೀಜಾಡಿ, ಇವರು ನಡೆಸಿದ ತಾಲೂಕು ಮಟ್ಟದ ಚಿತ್ರಕಲೆ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನವನ್ನು ಪಡೆದು ನಮ್ಮ ಶಾಲೆಗೆ ಕೀರ್ತಿ ತಂದಿದ್ದೀಯಾ. ಚಿತ್ರಕಲೆಯಲ್ಲದೆ ಇತರ ವಿಷಯಗಳಲ್ಲೂ ನಿನ್ನ ಪ್ರತಿಭೆ ಅಸಾಮಾನ್ಯ. ನಿನ್ನ ಪ್ರತಿಭೆ ನಿರಂತರ ಬೆಳಗಲಿ, ಬೆಳೆಯಲಿ ಎಂದು ಪ್ರೀತಿಯಿಂದ ಅಭಿಮಾನದಿಂದ ಹಾರೈಸುತ್ತೇವೆ.

ವಿದ್ಯಾರ್ಥಿಗಳು ಮತ್ತು ಶಿಕ್ಷಕರು

## ಗಣಿತ ಕುಣಿತ

| | | | | | |
|---|---|---|---|---|---|
| | | | 2 | 1 | |
| 1 | | | 4 | | |
| 5 | 4 | | | | |
| | | | | 4 | 6 |
| | | 2 | | | 4 |
| | 1 | 3 | | | |

ಪ್ರತೀ ಅಡ್ಡ ಮತ್ತು ಕಂಬ ಸಾಲಿನಲ್ಲಿ 1ರಿಂದ 6 ರ ವರೆಗಿನ ಅಂಕಿಗಳು, ಇಲ್ಲಿರುವ ಪ್ರತೀ ಆಯತದ ಒಳಗಡೆಯೂ 1ರಿಂದ 6 ಅಂಕಿಗಳು ಬರುವಂತೆ ತುಂಬಿ.

## ನನ್ನ ಮುದ್ದು ನಾಯಿ

ನಾಯಿಯೇ ನಾಯಿಯೇ?
ಏಕೆ ಬೊಗಳುವೆ?
ನಿಮ್ಮ ಪರಿಚಯವಿಲ್ಲವಲ್ಲ
ಅದಕೆ ನಾನು ಬೊಗಳುವೆ...



ನಾಯಿಯೇ ನಾಯಿಯೇ
ಏಕೆ ಬೆಳಗ್ಗೆ ನಿದ್ದೆ ಮಾಡುವೆ?
ರಾತ್ರಿಯಿಡೀ ಮನೆ ಕಾಯುವೆ
ಅದಕೆ ಈಗ ಮಲಗುವೆ.

ನಾಯಿಯೇ, ನಾಯಿಯೇ
ಏಕೆ ಕಚ್ಚಲು ಬರುವೆ?
ಮಕ್ಕಳೆಲ್ಲ ಕಲ್ಲಿನಿಂದ
ಹೊಡೆಯುವರು ಮಗುವೇ...

ತಿಂಡಿ ಕೊಡುವೆ ನಾಯಿಯೇ
ಕಚ್ಚಲು ಬರಬೇಡ...
ಕೊಟ್ಟ ತಿಂಡಿ ತಿನ್ನುವೆ
ಕಚ್ಚಲಾರೆ ಮಗುವೆ....

• ಶ್ರೀಪತಿ, 4ನೇ ತರಗತಿ

## ಓ ಸಹೃದಯಿ ದಾನಿಗಳೇ ನಿಮಗೆ ಶಿರಬಾಗಿದ ನಮನ

ದಿನಾಂಕ 26-01-2012 ಹಾಗೂ 29-01-2012 ರಂದು ನಮ್ಮ ಶಾಲೆಯಲ್ಲಿ ಅರ್ಥಪೂರ್ಣವಾಗಿ ಯಶಸ್ವಿಯಾಗಿ ಸಂಘಟಿಸಲ್ಪಟ್ಟ “ಶಾಲಾ ವಾರ್ಷಿಕೋತ್ಸವ ಮಕ್ಕಳ ಸಾಹಿತ್ಯ ಕಮ್ಮಟ ಹಾಗೂ ಮಕ್ಕಳ ಸಾಹಿತ್ಯೋತ್ಸವ ಕಾರ್ಯಕ್ರಮ”ಕ್ಕೆ ಉದಾರ ಧನಸಹಾಯ ಹಾಗೂ ವಸ್ತುರೂಪದ ಸಹಾಯ ನೀಡಿದ ಎಲ್ಲಾ ದಾನಿಗಳಿಗೆ ಶಾಲೆಯ ಕೃತಜ್ಞತೆ. ಸಾಹಿತ್ಯಿಕ ಪ್ರೀತಿಗೆ ನಾವು ಆಭಾರಿಗಳು. ದಾನಿಗಳ ವಿವರ ಇಂತಿದೆ:

- ಶ್ರೀ ವಿನಾಯಕ ದೇವಸ್ಥಾನ, ಆನೆಗುಡ್ಡೆ ಕುಂಭಾಸಿ (ಊಟೋಪಚಾರದ ವ್ಯವಸ್ಥೆ)
- ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ
- ಕಾರ್ಪೋರೇಶನ್ ಬ್ಯಾಂಕ್, ಕುಂದಾಪುರ
- ಶ್ರೀ ಜನಾರ್ದನ ಪೂಜಾರಿ, ಸಾಲಿಗ್ರಾಮ
- ಡಾ। ಉಮೇಶ್ ಪುತ್ರನ್, ಕುಂದಾಪುರ
- ಶ್ರೀ ಯೋಗೀಶ್ ನಾಯಕ್, ಶಿರಿಯಾರ
- ಪಂಡಿತ್ ಪ್ರಿಂಟರ್ಸ್ & ಪಬ್ಲಿಷರ್ಸ್, ಕುಂಭಾಸಿ
- ಶ್ರೀ ರತ್ನಾಕರ ಶೆಟ್ಟಿ, ಹೇರಾಡಿ
- ಶ್ರೀ ರಂಜಿತ್‌ಕುಮಾರ ಶೆಟ್ಟಿ, ಕಾಳಾವರ
- ಶ್ರೀ ಪ್ರಶಾಂತ್, ಶಿರಿಯಾರ
- ಶ್ರೀ ಗೋಕುಲ್‌ದಾಸ್, ಬಾರ್ಕೂರು
- ಶ್ರೀ ಚಂದ್ರ ಕುಲಾಲ್, ಹಿಮ್ಮತ್ತೂರು
- ಶ್ರೀ ಉಮೇಶ್ ನಾಯಕ್, ಶಿರಿಯಾರ

ಹಾಗೆಯೇ ಸರ್ವ ರೀತಿಯಲ್ಲೂ ಸಹಕರಿಸಿದ ಆತ್ಮೀಯ ಸ್ನೇಹಿತರಿಗೆ ನಮನ.

ಕುಂದಾಪುರ ವಲಯದ ಕಾರ್ಯದರ್ಶಿಗಳಾದ ಶ್ರೀ ಸುಬ್ರಹ್ಮಣ್ಯ ಶೆಟ್ಟಿಯವರಿಗೆ ಮನದುಂಬಿದ ವಂದನೆಗಳು. ಹಾಗೂ ಅಡುಗೆ ಸಿದ್ಧತೆಯಲ್ಲಿ ತಮ್ಮನ್ನು ತೊಡಗಿಸಿಕೊಂಡ ಬಾಬಿ ಕುಲಾಲ್ತಿ, ಸವಿತಾ, ಜ್ಯೋತಿ, ಶ್ರೀ ರವಿರಾಜ ಶೆಟ್ಟಿ, ಶ್ರೀ ಮಂಜು ಪೂಜಾರಿ, ಸಾವಿತ್ರಿ, ಮಾಲತಿ ಇವರ ಶ್ರಮಕ್ಕೆ, ಕೂಡಾ ಕಾರ್ಯಕ್ರಮದ ಯಶಸ್ಸಿನಲ್ಲಿ ಪಾಲಿದೆ. ಜೊತೆಗೆ ಸಹಕರಿಸಿದ ಹಳೆ ವಿದ್ಯಾರ್ಥಿಗಳು, ಊರ ನಾಗರಿಕರ ಸಹಕಾರ ಸ್ಮರಣೀಯ. ವಂದನೆಗಳು.

## ೧) ಪದ – ಪದಗಳ ಅರ್ಥವನ್ನು ಗಮನಿಸೋಣ.

| | |
|---|---|
| ಸಂಭಾಷಣೆ – ಮಾತುಕತೆ | ಸಂಕಟ – ಕಷ್ಟ |
| ನಳ್ಳಿ – ನಲ್ಲಿ | ಶಿರಬಾಗು – ನಮಸ್ಕರಿಸು |
| ಸಜ್ಜನರು – ಒಳ್ಳೆಯ ಜನ | ಹಸ್ತಾಕ್ಷರ – ಕೈ ಬರೆಹ, ಸಹಿ |

## ೨) ಪತ್ರಿಕಾ ಲೇಖನಗಳಲ್ಲಿನ ವಾಕ್ಯಗಳ ಮಾದರಿಯಂತೆ ನಮ್ಮದೇ ವಾಕ್ಯ ರಚಿಸೋಣ.

ಸಂಭಾಷಣೆ : ______________________________

______________________________

ಶಿರಬಾಗು : ______________________________

______________________________

## ೩) ಈ ಚಿತ್ರಕ್ಕೊಂದು ಪ್ರಶ್ನೆ ರಚಿಸೋಣ.



ನನ್ನ ಪ್ರಶ್ನೆ:

NOT TO BE REPUBLISHED @KTBS

## ೪) ಕೊಟ್ಟಿರುವ ಉತ್ತರದ ಸಹಾಯದಿಂದ ಈ ಗಾದೆಯನ್ನು ಪೂರ್ಣಗೊಳಿಸು.

೧. ವೇದ ಸುಳ್ಳಾದರೂ ______________.

ಅ) ಗಾದೆ ಸುಳ್ಳಾಗದು ಆ) ಹೆಜ್ಜೇನು ಸವಿದಂತೆ

ಇ) ಬಾಯಿ ಮೊಸರು ಈ) ಇಲಿಗೆ ಪ್ರಾಣ ಸಂಕಟ

## ೫) ಇಂಚರ ಮಾದರಿ ಪತ್ರಿಕೆಯಲ್ಲಿನ ವಿಷಯಗಳ ಶೀರ್ಷಿಕೆಗಳನ್ನು ಪಟ್ಟಿ ಮಾಡೋಣ.

| | |
|---|---|
| | |
| | |
| | |
| | |

## ೬) ಕಲ್ಪಿಸಿ ಬರೆಯೋಣ:

ನಾನೇ ಸಿಂಹ ಆಗಿದ್ದರೆ........?

@KTBS
NOT TO BE REPUBLISHED

## ೭) ಚಿತ್ರ ಗಮನಿಸಿ, ನಮ್ಮದೇ ಸಂಭಾಷಣೆ ರಚಿಸೋಣ.



೮) ನಿಮ್ಮ ಶಾಲೆಯಲ್ಲಿನ ಯಾವ ಯಾವ ವಿಷಯಗಳನ್ನು ಶಾಲಾ ಪತ್ರಿಕೆಯಲ್ಲಿ ತರಬಹುದು? ಯೋಚಿಸಿ ಬರೆ.

| | |
|---|---|
| ೧. | |
| ೨. | |
| ೩. | |
| ೪. | |
| ೫. | |
| ೬. | |

@KTBS
NOT TO BE REPUBLISHED

೯) ನಿಯತಕಾಲಿಕೆಗಳಲ್ಲಿ ಮಕ್ಕಳಿಗಾಗಿ ಇರುವ ವಿಷಯಗಳನ್ನು, ಶೀರ್ಷಿಕೆಗಳನ್ನು ಹುಡುಕಿ ಬರೆಯೋಣ.

| ನಿಯತಕಾಲಿಕೆಯ ಹೆಸರು | ವಿಷಯ / ಶೀರ್ಷಿಕೆ |
|---|---|
| | |
| | |
| | |

ಹಳೆಯ ನಿಯತಕಾಲಿಕೆಗಳು ಮತ್ತು ವಿಶೇಷ ಪುರವಣಿಯನ್ನೊಳಗೊಂಡ ವಾರ್ತಾಪತ್ರಿಕೆಗಳನ್ನು ಸಂಗ್ರಹಿಸೋಣ. (ಶಿಕ್ಷಕರ/ಪಾಲಕರ ಸಹಕಾರ ಪಡೆದು) ಅವುಗಳಲ್ಲಿ ಬಂದಿರುವ ವಿಭಿನ್ನ ಚಟುವಟಿಕೆಗಳನ್ನು ಓದಿ ನೋಟ್ ಪುಸ್ತಕದಲ್ಲಿ ಬರೆಯೋಣ.

## ೧೦) ಯಾವುದಾದರೂ ಎರಡು ಚಿಕ್ಕ ಕವನಗಳನ್ನು ಸಂಗ್ರಹಿಸಿ ಬರೆಯೋಣ.

@KTBS
NOT TO BE REPUBLISHED

ಯಾವುದಾದರೊಂದು ಕವನದ ಸಾರಾಂಶವನ್ನು ಬರೆಯೋಣ.

## ೧೧) ಚಿತ್ರ ಗಮನಿಸಿ, ಮಾತನಾಡೋಣ ಮತ್ತು ಇದಕ್ಕೊಂದು ಶೀರ್ಷಿಕೆ ಬರೆಯೋಣ.



ಶೀರ್ಷಿಕೆ:

ದಿನಪತ್ರಿಕೆಯಲ್ಲಿ ಮಕ್ಕಳಿಗಾಗಿ ಪ್ರಕಟವಾಗಿರುವ ಚಿತ್ರಗಳಲ್ಲಿ ಇಷ್ಟದ ಚಿತ್ರವೊಂದನ್ನು ಇಲ್ಲಿ ಬರೆಯೋಣ.

@KTBS NOT TO BE REPUBLISHED

೧೨) ಸಂಗ್ರಹಿಸಿದ ಯಾವುದಾದರೊಂದು ಕಥೆಯನ್ನು ಇಲ್ಲಿ ಬರೆಯೋಣ.

@KTBS
NOT TO BE REPUBLISHED

ನೀನು ಬರೆದ ಕಥೆಯಲ್ಲಿ ಇಷ್ಟವಾದ ಯಾವುದಾದರೂ ಒಂದು ಸಂಗತಿಯನ್ನು ಬರೆಯೋಣ.

______________________________

______________________________

______________________________

# ಲೇಖನ ಓದೋಣ

## ಕಲ್ಪನೆ ಕನಸಾದಾಗ...,

ಅಂದು ರಜಾದಿನ, ನನ್ನ ನಾಯಿ ಜೊತೆ ಹೊಲವೆಲ್ಲಾ ಸುತ್ತಿ, ಗೆಳೆಯರೊಂದಿಗೆ ಆಟ ಆಡಿಕೊಂಡು ಮನೆಗೆ ಬಂದಾಗ ಬಹಳ ಆಯಾಸವಾಗಿತ್ತು. ರಾತ್ರಿ ಊಟ ಮಾಡಿದ ಕೂಡಲೇ ನಿದ್ದೆ ಹತ್ತಿತ್ತು. ಗಾಢ ನಿದ್ರೆಯಲ್ಲಿ ಮಲಗಿದ್ದರಿಂದ, ಅಪ್ಪ-ಅಮ್ಮ ನನ್ನನ್ನು ಬಿಟ್ಟು ಬಾಗಿಲು ಹಾಕಿಕೊಂಡು ಪಕ್ಕದ ಬೀದಿಯ ತಿಮ್ಮಕ್ಕನ ಮನೆಗೆ ಹೋಗಿದ್ದರು. ಅಲ್ಲಿ ಅವರ ಮಗಳ ಮದುವೆ ತಯಾರಿ ನಡೆಯುತ್ತಿತ್ತು. ಊರಿನವರು ಮದುವೆ ನಡೆಸಿಕೊಡಲು ಮನೆ ಮನೆಗೂ ತಾಂಬೂಲ ನೀಡಿ ಆಹ್ವಾನಿಸುವ ಜೊತೆಗೆ ತಿಮ್ಮಕ್ಕನ ಮಗಳ ಅರಿಶಿಣ ಶಾಸ್ತ್ರದಲ್ಲಿ ಭಾಗವಹಿಸಿದ್ದರು.

ರಾತ್ರಿ ಸುಮಾರು ಹನ್ನೆರಡು ಗಂಟೆಯಾಗಿರಬಹುದು. ಇದ್ದಕ್ಕಿಂದಂತೆ ಕುಟ್‌ಕುಟ್ ಅಂತ ಶಬ್ದ ಕೇಳಿಸಿತು. ಶಬ್ದಕ್ಕೆ ನನಗೆ ಎಚ್ಚರವಾಯಿತು. ಹಾಗೆ ಗಮನಿಸುತ್ತಿದ್ದೆ. ಅದು ನಿಲ್ಲಲೇ ಇಲ್ಲ!.

ಮೆಲ್ಲನೆ, "ಅಪ್ಪಾ, ಅಪ್ಪಾ" ಎಂದು ಕರೆದೆ. ಆ ಕಡೆಯಿಂದ ಉತ್ತರ ಬರಲಿಲ್ಲ. ಮತ್ತೆ "ಅಮ್ಮಾ..! ಅಮ್ಮಾ..!" ಎಂದು ಕೂಗಿದೆ. ಆ ಕಡೆಯಿಂದ ಉತ್ತರ ಬರಲಿಲ್ಲ. ಜೋರು ಮಳೆಯಾಗಿದ್ದರಿಂದ ಕರೆಂಟ್ ಇರಲಿಲ್ಲ. ದೇವರಗೂಡಿನಲ್ಲಿ ಹಚ್ಚಿದ್ದ ದೀಪ ಇನ್ನೇನು ಕೊನೆಯ ಹಂತ ತಲುಪಿ ಮಿಣಮಿಣ ಅನ್ನುತ್ತಿತ್ತು. ಎದ್ದು ಅಪ್ಪ-ಅಮ್ಮನನ್ನು ಹುಡುಕಾಡಿದೆ. ಯಾರೂ ಇಲ್ಲ! ಬಾಗಿಲು ಮುಚ್ಚಿತ್ತು, ಆದ್ದರಿಂದ ನನಗೆ ಗಾಬರಿಯಾಯಿತು. ತಕ್ಷಣ ತಿಮ್ಮಕ್ಕನ ಮನೆಗೆ ಹೋಗಬೇಕು ಎಂದು ಹೇಳುತ್ತಿದ್ದುದು ನೆನಪಾಯಿತು. ಈಗ ನನ್ನ ಎದೆ ಜೋರಾಗಿ ಬಡಿದುಕೊಳ್ಳಲು ಪ್ರಾರಂಭವಾಯಿತು.

> **ಪದ ಪದಗಳ ಅರ್ಥ :**
> **ಹೊಲ:** ಜಮೀನು
> **ಗಾಢನಿದ್ರೆ:** ಜೋರಾದ ನಿದ್ರೆ
> **ತಾಂಬೂಲ:** ಎಲೆ ಅಡಿಕೆ
> **ಆಹ್ವಾನ:** ಕರೆ
> **ಗುಹೆ:** ಗವಿ, ಬಂಡೆಯ ಸಂಧಿ

©KTBS NOT TO BE REPUBLISHED

ಕಳೆದ ರಜೆಯಲ್ಲಿ ಅಜ್ಜಿ 'ರಾಕ್ಷಸನ ಕಥೆ' ಹೇಳಿದ್ದು ನೆನಪಾಯಿತು. ಕಥೆಯಲ್ಲಿ ರಾಕ್ಷಸ ಮನುಷ್ಯರ ವಾಸನೆ ಹುಡುಕಿಕೊಂಡು ಬಂದು ಎತ್ತಿಕೊಂಡು ಹೋಗುತ್ತಿದ್ದ. ತನ್ನ ಗುಹೆಯೊಳಗೆ ಇಟ್ಟು ಹಸಿವಾದಾಗ ತಿಂದು ಮೂಳೆಗಳ ರಾಶಿ ಹಾಕಿದ್ದ!.

ಎಲ್ಲಾ ನೆನಪಾಗುತ್ತಿದ್ದಂತೆ, ನನ್ನ ಮೈ ನಡುಗತೊಡಗಿತು. ಇತ್ತ 'ಕುಟ್‌ಕುಟ್' ಶಬ್ದ ನಿಂತಿತು. ಸದ್ಯ ನಿಂತಿತಲ್ಲ! ಎನ್ನುವಷ್ಟರಲ್ಲೇ ಮತ್ತೆ 'ಡಬ್‌ಡಬ್' ಸದ್ದು ಪ್ರಾರಂಭವಾಯಿತು. ರಾಕ್ಷಸ ಹೇಗಿರಬಹುದು!? ಅಜ್ಜಿ ಹೇಳಿದ್ದಂತೆಯೇ, ಕೋರೆ ಹಲ್ಲು, ದೊಡ್ಡಗಾತ್ರ ಇರಬಹುದೇ? ಅಥವಾ ಇನ್ನೂ ವಿಚಿತ್ರವಾಗಿರಬಹುದೇ? ತಲೆಯೊಳಗೆ ಏನೇನೋ ಪ್ರಶ್ನೆಗಳು ಸುತ್ತ ತೊಡಗಿದವು.

ಮನೆಯಲ್ಲಿ ನನ್ನನ್ನು ಧೈರ್ಯವಂತ ಅಂತಲೇ ಹೇಳುತ್ತಿದ್ದರು. ಅದಕ್ಕೆ ಒಬ್ಬನನ್ನೇ ಬಿಟ್ಟು ಹೋಗಿದ್ದಾರೆ. ಆದರೆ ಈಗ ಭಯದಿಂದ ಮರೆಯಾಗಿ ನಿಂತು ರಾಕ್ಷಸನನ್ನು ನೋಡಬೇಕಲ್ಲಾ!. ಏನು ಮಾಡೋದು? ತಕ್ಷಣ ಕಿಟಕಿ ನೆನಪಾಗಿ ಮೆಲ್ಲನೆ ಹೆಜ್ಜೆ ಹಾಕುತ್ತಾ ಕಿಟಕಿಯ ಬಳಿಗೆ ಬಂದೆ.

ಆಗ ಹೊರಗಡೆ ದೂರದಲ್ಲಿ ಬೃಹದಾಕಾರದ ಕರಿನೆರಳು ಕಾಣಿಸಿತು. ಅದು ಅತ್ತ ಇತ್ತ ಓಲಾಡುತ್ತಾ ನನ್ನತ್ತಲೇ ಬರುತ್ತಿತ್ತು. ಮೈ ಬೆವರ ತೊಡಗಿತು. ನಾಲಿಗೆ ಒಣಗಿತು. ಅಲ್ಲೇ

ಕಿಟಕಿಯ ಪಕ್ಕ ಕುಳಿತು ಬಿಟ್ಟೆ. ರಾಕ್ಷಸ ನನ್ನ ಬಳಿಗೆ ಬಂದು ಹಿಡೆದೇ ಬಿಟ್ಟ ಎಂದೆನಿಸಿ ಕಿರುಚಲು ಪ್ರಯತ್ನಿಸಿದೆ. ಧ್ವನಿಯೇ ಬರುತ್ತಿಲ್ಲ! ಹೋ...! ಅಂತ ಕಿರುಚಿ, ಮೈ ಕೊಡವಿ ಒಮ್ಮೆ ಜೋರಾಗಿ ಒದ್ದೆ.

ಅಲ್ಲಿ ನೀರು ಕುಡಿಯಲು ಇಟ್ಟಿದ್ದ ಚೊಂಬು ಮತ್ತು ಲೋಟ 'ಟಣ್ ಟಣ್' ಅಂತ ನೆಲಕ್ಕುರುಳಿದವು. ಕೂಡಲೆ ಅಪ್ಪ "ಮಗೂ...ಮಗೂ...ಏನಾಯಿತು?" ಎಂದರು. ನನಗೆ ಆಗ ಎಚ್ಚರವಾಯಿತು. ಅಜ್ಜಿ ಹೇಳಿದ್ದ ಕಥೆ ಕನಸಿನಲ್ಲಿ ಬಂದು ಮನೆ ತುಂಬ ನೀರು ಚೆಲ್ಲುವಂತೆ ಮಾಡಿತ್ತು!. ನಾನು ಕಣ್ಣು ಬಿಡಲಿಲ್ಲ. ಮಗ್ಗಲು ಬದಲಿಸಿ, ಮಲಗಿರುವಂತೆ ನಾಟಕ ಮಾಡಿದೆ. ಅಪ್ಪ ಬೈಯುತ್ತಾ ಹರಡಿದ್ದ ನೀರನ್ನು ಬಟ್ಟೆಯಿಂದ ಒರೆಸುತ್ತಿದ್ದರು.



ನಡೆದುದೆಲ್ಲವನ್ನು ನೆನೆದೆ. ಹಾಗಿದ್ದರೆ ಆ ಬೃಹದಾಕಾರದ ನೆರಳು ಏನು? ಎಂದು ಯೋಚಿಸಿದೆ. ಹೋ! ನೆನಪಾಯಿತು. ಅದು ಮನೆ ಹತ್ತಿರದ ಮಾವಿನ ಮರ! ಅದೇನೋ ಸರಿ, ಆದರೆ ಈಗಲೂ 'ಟಕ್‌ಟಕ್' ಶಬ್ದ ಬರುತ್ತಿದೆಯಲ್ಲಾ?! ಅಮ್ಮ "ರೀ ಬೆಳಿಗ್ಗೆ ಆ ಕೋಳಿ ಗೂಡಿನಲ್ಲಿ ತಟ್ಟೆಯಲ್ಲಿ ರಾಗಿ ಹಾಕಿದ್ದೆ. ಅದನ್ನು ತೆಗೆಯಲು ಮರೆತೆ. ಕತ್ತಲೆಯಲ್ಲೂ ಕುಟುಕುತ್ತಿವೆ. ಅದನ್ನು ತೆಗೆಯಿರಿ. ಇಲ್ಲ ಅಂದ್ರೆ ನಿದ್ದೆಕೊಡಲ್ಲ!" ಎಂದರು. ಈಗ ಎಲ್ಲವೂ ಅರ್ಥವಾಗಿತ್ತು. ಸುಮ್ಮನೆ ಮಲಗಿದೆ.

NOT TO BE REPUBLISHED @KTBS

## ೧. ಇಲ್ಲಿನ ವಾಕ್ಯಗಳನ್ನು ಓದಿ, ನಾವೂ ನಮ್ಮ ವಾಕ್ಯಗಳನ್ನು ಬರೆಯೋಣ.

| ಪದಗಳು | ವಾಕ್ಯಗಳ ಓದು | ನಮ್ಮದೇ ವಾಕ್ಯ |
|---|---|---|
| ಮಿಣಮಿಣ | ದೀಪಾವಳಿ ಹಬ್ಬದಲ್ಲಿ ಮನೆಮನೆಗಳಲ್ಲಿ ದೀಪಗಳು ಮಿಣಮಿಣ ಮಿನುಗುತ್ತಿದ್ದವು. | |
| ಫಳಫಳ | ಗಾಜಿನ ಲೋಟವು ಬಿಸಿಲಿಗೆ ಫಳಫಳ ಹೊಳೆಯುತ್ತದೆ. | |
| ಕಟ್‌ಕಟ್ | ಮರಕುಟಿಗ ಪಕ್ಷಿ ಮರವನ್ನು ಕುಟ್ಟುವಾಗ ಕಟ್‌ಕಟ್ ಎಂದು ಶಬ್ಧ ಬರುತ್ತದೆ. | |
| ಟಣ್‌ಟಣ್ | ಟಣ್‌ಟಣ್ ಎಂದು ಶಾಲೆಯ ಘಂಟೆ ಬಾರಿಸಿತು. | |

೨. ನಿಮ್ಮ ಕನಸಿನ ಯಾವುದಾದರೊಂದು ಸನ್ನಿವೇಶವನ್ನು ಕಲ್ಪಿಸಿಕೊಂಡು ಚಿತ್ರ ಬಿಡಿಸೋಣ.

@KTBS
NOT TO BE REPUBLISHED

೩. ಈ ಸನ್ನಿವೇಶದ ಬಗ್ಗೆ ಗೆಳೆಯರೊಂದಿಗೆ ಚರ್ಚಿಸಿ ಅಭಿಪ್ರಾಯವನ್ನು ಬರೆಯೋಣ.






೪. ಈ ಚಿತ್ರ ಕುರಿತು ಹಿರಿಯರೊಂದಿಗೆ ಚರ್ಚಿಸೋಣ.



೫. ಶಾಲಾ ಪ್ರಾರ್ಥನೆಯ ಸಮಯದಲ್ಲಿ ಚರ್ಚಿಸುವ ವಿಷಯಗಳನ್ನು ಪಟ್ಟಿ ಮಾಡೋಣ.

| | |
|---|---|
| ೧. | |
| ೨. | |
| ೩. | |
| ೪. | |
| ೫. | |

* ನೀನು ಓದಿರುವ ಮತ್ತು ಆಲಿಸಿರುವ ಸುಭಾಷಿತಗಳನ್ನು ಪಟ್ಟಿ ಮಾಡೋಣ.

| | |
|---|---|
| ೧. | |
| ೨. | |
| ೩. | |
| ೪. | |
| ೫. | |

@KTBS NOT TO BE REPUBLISHED

## ೬. ಈ ಸನ್ನಿವೇಶವನ್ನು ಗಮನಿಸಿ ಮಾತನಾಡೋಣ.



## ಈ ಸನ್ನಿವೇಶವನ್ನು ಕುರಿತು ನಮ್ಮದೇ ವಾಕ್ಯಗಳಲ್ಲಿ ಬರೆಯೋಣ.

@KTBS NOT TO BE REPUBLISHED

## ೭. ಶಾಲಾ ವಾರ್ಷಿಕೋತ್ಸವದ ಸಿದ್ಧತೆಗೆ ಅಗತ್ಯವಾದ ಅಂಶಗಳನ್ನು ಪಟ್ಟಿ ಮಾಡೋಣ.




ಶಾಲಾ ವಾರ್ಷಿಕೋತ್ಸವದ ಸಿದ್ಧತೆಗೆ ನೀನು ಏನೆಲ್ಲಾ ಸಹಾಯ ಮಾಡಿರುವೆ? ಕೆಲವು ಅಂಶಗಳನ್ನು ಇಲ್ಲಿ ಬರೆಯೋಣ.

______________________________

______________________________

______________________________

______________________________

______________________________

NOT TO BE REPUBLISHED @KTBS

೮. ಶಾಲೆಯಲ್ಲಿ ನಡೆದ ಕಾರ್ಯಕ್ರಮಗಳಲ್ಲಿ ನಿನಗೆ ಇಷ್ಟವಾದ ಕಾರ್ಯಕ್ರಮ ಕುರಿತು ಚಿತ್ರ / ಲೇಖನ / ಕವನ ಬರೆಯೋಣ.

@KTBS
NOT TO BE REPUBLISHED

೯. ಹಿರಿಯರಿಂದ ಜನಪದ ಕಥೆ, ಹಾಡುಗಳನ್ನು ಸಂಗ್ರಹಿಸೋಣ. ಯಾವುದಾದರೊಂದು ಕಥೆ / ಹಾಡನ್ನು ಇಲ್ಲಿ ಬರೆಯೋಣ.

@KTBS
NOT TO BE REPUBLISHED

**ನಮ್ಮ ಶಾಲಾ ಪತ್ರಿಕೆ:** ಮಕ್ಕಳೆಲ್ಲರೂ ಸೇರಿ ಶಿಕ್ಷಕರು, ಹಿರಿಯರು, ಸ್ನೇಹಿತರ ನೆರವು ಮತ್ತು ಮಾರ್ಗದರ್ಶನದೊಂದಿಗೆ ಆಕರ್ಷಕ ಶೀರ್ಷಿಕೆಯಿರುವ ಒಂದು ಶಾಲಾ ಪತ್ರಿಕೆಯನ್ನು ರಚಿಸಿ.

## ೧೦. ಇದುವರೆಗೂ ಕಲಿತಿರುವ ಹೊಸ ಪದಗಳ ಉಕ್ತಲೇಖನವನ್ನು ತೆಗೆದುಕೊಳ್ಳೋಣ.

| ಕ್ರ.ಸಂ | ಪದಗಳು | ಕ್ರ.ಸಂ | ಪದಗಳು |
|---|---|---|---|
| 1. | | 11. | |
| 2. | | 12. | |
| 3. | | 13. | |
| 4. | | 14. | |
| 5. | | 15. | |
| 6. | | 16. | |
| 7. | | 17. | |
| 8. | | 18. | |
| 9. | | 19. | |
| 10. | | 20. | |

@KTBS NOT TO BE REPUBLISHED

**ತಪ್ಪಾದ ಪದಗಳನ್ನು ಸರಿಪಡಿಸಿ ಬರೆಯೋಣ.**

| | |
|---|---|
| | |
| | |
| | |
| | |
| | |

★ ಸುಗಮಕಾರರು ಪಠ್ಯದಲ್ಲಿ ಕಲಿತ ಪದಗಳನ್ನು ಉಕ್ತಲೇಖನ ನೀಡಿ, ದೃಢೀಕರಿಸಿ, ಹಿಮ್ಮಾಹಿತಿ ನೀಡುವುದು.

# ೮. ಕಿತ್ತೂರು ರಾಣಿ ಚೆನ್ನಮ್ಮ (ಲಾವಣಿ)



ಕೇಳಿರಿ ಮಕ್ಕಳೇ ನಾಳಿನ ಪ್ರಜೆಗಳೇ
ಕೇಳಿರಿ ಹೇಳುವೆ ಮಾತೊಂದ।
ಸ್ವಾತಂತ್ರ್ಯಕ್ಕಾಗಿ ಹೋರಾಡಿ ಮಡಿದ
ಕಿತ್ತೂರು ರಾಣಿಯ ಕಥೆಯೊಂದ॥




ಬೆಳಗಾವಿ ಜಿಲ್ಲೆಯ ಕಾಕತಿಯಲ್ಲಿ
ವೀರ ಪುತ್ರಿಯು ಜನಿಸಿಹಳು।
ಧೂಳಪ್ಪ ದೇಸಾಯಿ ಪದ್ಮಾವತಿಯ
ಕುಲ ಪುತ್ರಿಯೇ ಚೆನ್ನಮ್ಮ॥

ತಂದೆಯೊಡನೆ ಪುರುಷ ವೇಷದಿ
ಬೇಟೆಗೆ ಕಾಡಿಗೆ ಹೋಗಿಹಳು।
ಕತ್ತಿ ವರಸೆ ಬಿಲ್ಲು ಬಾಣ
ಕುದುರೆ ಸವಾರಿಯ ಕಲಿತಿಹಳು॥

@KTBS NOT TO BE REPUBLISHED



ಕಿತ್ತೂರು ದೊರೆ ಮಲ್ಲಸರ್ಜನ
ಪ್ರೀತಿಯ ಮಡದಿ ಎನಿಸಿಹಳು।
ಮಲ್ಲಸರ್ಜನ ಮರಣ ನಂತರ
ಕಿತ್ತೂರು ರಾಣಿಯೇ ಆಗಿಹಳು॥

ಕಿತ್ತೂರು ನಾಡಿನ ಸ್ವಾತಂತ್ರ್ಯಕ್ಕಾಗಿ
ಬ್ರಿಟಿಷರ ವಿರುದ್ಧ ಹೋರಾಡಿಹಳು।
ಥ್ಯಾಕರೆಯನ್ನು ಸೋಲಿಸಿ ಅವಳು
ವೀರ ವನಿತೆ ಎನಿಸಿಹಳು॥

(ಸಂಗ್ರಹ)

## ೧. ಕೊಟ್ಟಿರುವ ಪದದ ಮಾದರಿ ವಾಕ್ಯವನ್ನು ಅನುಸರಿಸಿ ಸ್ವಂತ ವಾಕ್ಯ ರಚಿಸೋಣ.

೧) **ಪುತ್ರಿ :** ನಾನು ನನ್ನ ತಂದೆಯ ಪ್ರೀತಿಯ ಪುತ್ರಿ.

________________________________________

________________________________________

೨) **ಮಡದಿ :** ಸೀತೆಯು ರಾಮನ ಮಡದಿ.

________________________________________

________________________________________

೩) **ದೊರೆ :** ಮಯೂರವರ್ಮ ಕನ್ನಡದ ಮೊದಲ ದೊರೆ.

________________________________________

________________________________________

೪) **ಜನನ :** ಎಲ್ಲರೂ ಜನನ ನೊಂದಣಿಯನ್ನು ಮಾಡಿಸಲೇಬೇಕು.

________________________________________

________________________________________

೫) **ವನಿತೆ :** ಒನಕೆ ಓಬವ್ವ ಚಿತ್ರದುರ್ಗದ ವೀರ ವನಿತೆ.

________________________________________

________________________________________

@KTBS NOT TO BE REPUBLISHED

## ೨. ಪದಗಳನ್ನು ಮಾದರಿಯಂತೆ ಬಿಡಿಸಿ ಬರೆಯೋಣ.

**ಮಾದರಿ 1 :**

| | | | | |
|---|---|---|---|---|
| ಮನೆಯಲ್ಲಿ | = | ಮನೆ | + | ಅಲ್ಲಿ |
| ತರಗತಿಯಲ್ಲಿ | = | | + | |
| ನದಿಯಲ್ಲಿ | = | | + | |
| ದೋಣಿಯಲ್ಲಿ | = | | + | |

**ಗಮನಿಸು :** ಹೀಗೆ ಪದಗಳನ್ನು ಬಿಡಿಸಿ ಬರೆದಾಗ ಎರಡೂ ಪದಗಳಿಗೂ ಅರ್ಥ ಬರಬೇಕು.

ಮಾದರಿ 2:

| | | | | |
|---|---|---|---|---|
| ನುಡಿ | + | ಒಂದು | = | ನುಡಿಯೊಂದು |
| ಮಾತು | + | ಒಂದು | = | |
| ಕಥೆ | + | ಒಂದು | = | |
| ಮನೆ | + | ಒಂದು | = | |

## ೩. ಚಿತ್ರವನ್ನು ಗಮನಿಸಿ.



ವ್ಯಕ್ತಿ, ಸ್ಥಳ, ಊರು, ಪ್ರಾಣಿ, ಪಕ್ಷಿಗಳ ಹೆಸರನ್ನು ಸೂಚಿಸುವ ಪದಗಳಿಗೆ 'ನಾಮಪದ' ಎನ್ನುತ್ತೇವೆ.

ಮೇಲಿನ ಚಿತ್ರದಲ್ಲಿ ಹೆಸರು ಸೂಚಿಸುವ (ನಾಮಪದ) ಪದಗಳನ್ನು ಹುಡುಕಿ ಬರೆಯೋಣ.

______ ______ ______ ______

______ ______ ______ ______

______ ______ ______ ______

## ೪. ಈ ಕಥೆಯನ್ನು ಗಟ್ಟಿಯಾಗಿ ಓದಿ, ಹೆಸರು ಸೂಚಿಸುವ (ನಾಮಪದ) ಪದಗಳನ್ನು ಗುರುತಿಸಿ ಬರೆಯೋಣ.



ಮೈಲಾಪುರ ಎಂಬ ಊರಿನಲ್ಲಿ ತಾರಕ ನದಿ ಹರಿಯುತ್ತಿತ್ತು. ಆ ನದಿ ತೀರದಲ್ಲಿ ಹುಲ್ಲು ಸೊಂಪಾಗಿ ಬೆಳೆದಿತ್ತು. ನದಿ ಪಕ್ಕದಲ್ಲಿ ಮರಗಳು ಎತ್ತರಕ್ಕೆ ಬೆಳೆದಿದ್ದವು.

ಒಂದು ಎತ್ತರದ ಮರ ಹುಲ್ಲನ್ನು ನೋಡಿ ಜಂಬದಿಂದ ಹೇಳಿತು. "ನೋಡು, ನಾನು ಎಷ್ಟು ಎತ್ತರವಾಗಿ ಮತ್ತು ಬಲಶಾಲಿಯಾಗಿ ಬೆಳೆದಿರುವೆ. ನನ್ನ ಮುಂದೆ ನಿನ್ನ ಆಕಾರ ತುಂಬಾ ಚಿಕ್ಕದು ಮತ್ತು ನೀನು ಬಲಹೀನ" ಎಂದಿತು.



ಈ ಮಾತನ್ನು ಕೇಳಿ ಹುಲ್ಲು ಏನ್ನನ್ನೂ ಹೇಳದೇ ನಕ್ಕು ಸುಮ್ಮನಾಯಿತು. ಮುಂದೆ ಒಂದು ದಿನ ಭಯಂಕರ ಸುಂಟರಗಾಳಿ ಬೀಸಿತು. ಜೋರಾಗಿ ಮಳೆ ಸುರಿಯಿತು.



ಮರವು ಮುರಿದು ನೆಲದ ಮೇಲೆ ಬಿದ್ದಿತು. ಆದರೆ ಹುಲ್ಲು ಮಾತ್ರ ಬಾಗಿ ನೆಲದ ಮೇಲೆ ನಿಂತಿತ್ತು. ಮುರಿದು ಬಿದ್ದ ಮರಕ್ಕೆ ತನ್ನ ಸೊಕ್ಕಿನ ಅರಿವಾಯಿತು. ಎಷ್ಟೇ ಎತ್ತರಕ್ಕೆ ಬೆಳೆದರೂ ವಿನಯದಿಂದ ಇರಬೇಕು ಎಂಬ ಸತ್ಯ ಅದಕ್ಕೆ ತಿಳಿಯಿತು. ಆದರೆ ಕಾಲ ಮಿಂಚಿ ಹೋಗಿತ್ತು.

©KTBS NOT TO BE REPUBLISHED

### ಈ ಕಥೆಯಲ್ಲಿ ಬಂದಿರುವ ಹೆಸರುಗಳನ್ನು (ನಾಮಪದ) ಪಟ್ಟಿ ಮಾಡೋಣ.

| | | |
|---|---|---|
| ______ | ______ | ______ |
| ______ | ______ | ______ |
| ______ | ______ | ______ |
| ______ | ______ | ______ |

೫. ಈ ಪದ್ಯವನ್ನು ಲಯಬದ್ಧವಾಗಿ ಹಾಡಿ, ಪದ್ಯದಲ್ಲಿನ ಊರು ಮತ್ತು ವಸ್ತುಗಳ ಹೆಸರುಗಳನ್ನು ಗುರುತಿಸಿ ಓದಿ ನೋಟ್ ಪುಸ್ತಕದಲ್ಲಿ ಬರೆಯೋಣ.

ಚುಕು ಬುಕು ಚುಕು ಬುಕು ರೈಲುಗಾಡಿ।
ಬನ್ನಿರಿ ಹತ್ತಿರಿ ಸವಾರಿ ಮಾಡಿ॥

ಬೆಂಗಳೂರಿಗೆ ಹೋಗೋಣ।
ವಿಧಾನಸೌಧ ನೋಡೋಣ॥

ಮೈಸೂರಿಗೆ ಹೋಗೋಣ।
ಅರಮನೆಯನ್ನು ನೋಡೋಣ॥

ಧಾರವಾಡಕ್ಕೆ ಹೋಗೋಣ।
ಪೇಡಾವನ್ನು ಸವಿಯೋಣ॥

ವಿಜಯಪುರಕ್ಕೆ ಹೋಗೋಣ।
ಗೋಳಗುಮ್ಮಟ ನೋಡೋಣ॥

ಕೊಡಗಿಗೆ ನಾವು ಹೋಗೋಣ।
ಚಂದದ ಕಿತ್ತಳೆ ಸವಿಯೋಣ॥

ಚಿಕ್ಕಮಗಳೂರಿಗೆ ಹೋಗೋಣ।
ರುಚಿ ರುಚಿ ಕಾಫಿ ಸವಿಯೋಣ॥

ಮಂಗಳೂರಿಗೆ ಹೋಗೋಣ।
ಅಂದದ ಬಂದರು ನೋಡೋಣ॥

ಚಿತ್ರದುರ್ಗಕ್ಕೆ ಹೋಗೋಣ।
ಕೋಟೆಯ ಬಗ್ಗೆ ತಿಳಿಯೋಣ॥

(ಸಂಗ್ರಹ)

**ಸೂಚನೆ:** ಇದೇ ರೀತಿ ಉಳಿದ ಜಿಲ್ಲೆಗಳ ವಿಶೇಷತೆಗಳನ್ನು ಸೇರಿಸಿ ಹಾಡನ್ನು ಮುಂದುವರಿಸೋಣ.

@KTBS NOT TO BE REPUBLISHED

೬. ಮನೆಯಿಂದ ಶಾಲೆಗೆ ಬರುವಾಗ ಗಮನಿಸಿದ ಹೆಸರು / ನಾಮಪದಗಳನ್ನು ಬರೆಯೋಣ.

| ವಸ್ತು | ವ್ಯಕ್ತಿ | ಸ್ಥಳ | ಪ್ರಾಣಿ |
|---|---|---|---|
| | | | |
| | | | |
| | | | |
| | | | |
| | | | |

@KTBS
NOT TO BE REPUBLISHED

## ೭. ಗುರುತಿಸಲಾಗಿರುವ ಲೇಖನ ಚಿಹ್ನೆಗಳು ಕಥೆಯಲ್ಲಿ ಎಷ್ಟು ಬಾರಿ ಬಂದಿವೆ ಎಂದು ಕೊಟ್ಟಿರುವ ಖಾಲಿ ಜಾಗದಲ್ಲಿ ಎಣಿಸಿ ಬರೆಯೋಣ. ( , . ? ! )



ಒಂದು ಕುದುರೆ ಕಾಡಿನೊಳಗೆ ಹುಲ್ಲು ಮೇಯುತ್ತಿತ್ತು. ಹಸಿದ ತೋಳ ಕುದುರೆಯನ್ನು ನೋಡಿ ತಿನ್ನಲೆಂದು ಓಡಿ ಬಂದಿತು. ಕುದುರೆಗೆ ತಪ್ಪಿಸಿಕೊಳ್ಳಲು ಆಗದೆಂದು ಗೊತ್ತಾಯಿತು.



ಆಗ ಅದು ಒಂದು ಉಪಾಯ ಹೂಡಿತು. "ತೋಳಣ್ಣ..! ತೋಳಣ್ಣ..! ನೀನು ಈಗ ನನ್ನನ್ನು ತಿನ್ನಬೇಕೇ? ಆದರೆ ನನ್ನ ಹಿಂಗಾಲಿಗೆ ಮುಳ್ಳು ಚುಚ್ಚಿ ಕೊಂಡಿದೆ. ಅದು ನಿನ್ನ ಬಾಯಿಗೆ ಚುಚ್ಚಬಹುದು. ಮುಳ್ಳನ್ನು ತೆಗೆದು ನಂತರ ನನ್ನನ್ನು ತಿನ್ನು" ಎಂದು ಹೇಳಿತು. ಕುದುರೆಯ ಕಾಲು ಎಳೆದು, ಬೀಳಿಸಿ, ಕೊಂದು ತಿನ್ನಬಹುದೆಂದು ತೋಳ ಆನಂದಿಸಿತು. ಹಿಂಗಾಲುಗಳ ಬಳಿಗೆ ಬಂದಿತು.



ಕೂಡಲೇ ಕುದುರೆಯು ಕಾಲುಗಳಿಂದ ಜೋರಾಗಿ ಒದೆಯಿತು. ಒದೆತದಿಂದ ತೋಳ ಅಯ್ಯೋ..! ಎಂದು ಕೂಗುತ್ತಾ ಕೆಳಗೆ ಬಿದ್ದಿತು. ಕುದುರೆಯು ಅಲ್ಲಿಂದ ಓಡಿ ಹೋಯಿತು.




| ಅಲ್ಪವಿರಾಮ (,) | ಪೂರ್ಣವಿರಾಮ (.) | ಭಾವಸೂಚಕ (!) | ಪ್ರಶ್ನಾರ್ಥಕ (?) |
|---|---|---|---|
| | | | |

NOT TO BE REPUBLISHED @KTBS

## ೮. ಈ ಪದ್ಯವನ್ನು ಸೂಕ್ತ ಸ್ವರಭಾರದೊಂದಿಗೆ ಓದೋಣ.



ಮರು ಮಾತಾಡದೆ ಕಿಂದರಿ ಜೋಗಿ ಕಟ್ಟೆಯನಿಳಿದನು. ಬೀದಿಗೆ ಹೋಗಿ, ಗಡ್ಡವ ನೀವುತ ಸುತ್ತಲು ನೋಡಿ. ಮಂತ್ರವ ಬಾಯಲಿ ಮಣಮಣ ಹಾಡಿ ಕಿಂದರಿ ಬಾರಿಸ ತೊಡಗಿದನು ಜಗವನೆ ಮೋಹಿಸಿತಾ ನಾದ! ಏನಿದು? ಏನಿದು ಗಜಿ ಬಿಜಿಯೆಲ್ಲಿ? ಊರನೆ ಮುಳುಗಿಪ ನಾದವಿದೆಲ್ಲಿ? ಇಲಿಗಳೂ! ಇಲಿಗಳೂ! ಇಲಿಗಳ ಹಿಂಡು ಬಳಬಳ ಹರಿದವು ಇಲಿಗಳ ದಂಡು ಅನ್ನದ ಮಡಕೆಯ ನಗಲಿದವು ಟೋಪಿಯ ಗೂಡನು ತ್ಯಜಿಸಿದವು ಬಂದವು ಅಂಗಿಯ ಜೇಬನು ಬಿಟ್ಟು ಮಕ್ಕಳ ಕಾಲಿನ ಚೀಲವ ಬಿಟ್ಟು ಹಾರುತ ಬಂದವು ಓಡುತ ಬಂದವು ನೆಗೆಯುತ ಬಂದವು ಕುಣಿಯುತ ಬಂದವು ಜೋಗಿಯು ಬಾರಿಸೆ ಕಿಂದರಿಯ ಸಣ್ಣಿಲಿ, ದೊಡ್ಡಿಲಿ, ಮೂಗಿಲಿ, ಸೊಂಡಿಲಿ ಅಣ್ಣಿಲಿ, ತಮ್ಮಿಲಿ, ಅವ್ವಿಲಿ, ಅಪ್ಪಿಲಿ, ಮಾವಿಲಿ, ಭಾವಿಲಿ, ಅಕ್ಕಿಲಿ, ತಂಗಿಲಿ, ಗಂಡಿಲಿ, ಹೆಣ್ಣಿಲಿ, ಮುದುಕಿಲಿ, ಹುಡುಗಿಲಿ ಎಲ್ಲಾ ಬಂದವು ಓಡೋಡಿ ಜೋಗಿಯು ಬಾರಿಸೆ ಕಿಂದರಿಯ! ಬಂದವು ನಾನಾ ಬಣ್ಣದ ಇಲಿಗಳು ಕೆಂಪಿನ ಇಲಿಗಳು, ಹಳದಿಯ ಇಲಿಗಳು, ಬೆಳ್ಳಿಲಿ, ಕರಿಯಿಲಿ, ಗಿರಿಯಿಲಿ, ಹೊಲದಿಲಿ, ಕುಂಕುಮ ರಾಗದ, ಚಂದನ ರಾಗದ, ಹಸುರಿನ ಬಣ್ಣದ, ಪಚ್ಚೆಯ ವರ್ಣದ, ಸಂಜೆಯ ರಾಗದ, ಗಗನದ ರಾಗದ ನಾನಾ ವರ್ಣದ ಇಲಿಗಳು ಬಂದವು ಕುಣಿಯುತ ನಲಿಯುತ ಸಂತಸದಿ ಜೋಗಿಯು ಬಾರಿಸೆ ಕಿಂದರಿಯ ನೋಡಿರಿ! ಕಾಣಿರಿ! ಬರುತಿಹವಿನ್ನೂ ಅಟ್ಟದ ಮೇಲಿಂ ಬರುವುವು ಕೆಲವು, ಕಣಜದ ಕಡೆಯಿಂ ಬರುವುವು ಹಲವು, ಓಹೋ! ಬಂದವು ಹಿಂಡಿಂಡಾಗಿ! ಕುಂಟಿಲಿ, ಕಿವುಡಿಲಿ, ಹೆಳವಿಲಿ, ಮೂಗಿಲಿ ಚೀ ಪೀ ಎನ್ನುತ ಕೂಗುತಲೋಡಿ ಗಹ ಗಹಿಸುತ ನೆರೆ ನೆರೆನಲಿದಾಡಿ ಬಂದಿತು ಮೂಷಿಕ ಸಂಕುಲವು ಜೋಗಿಯು ಬಾರಿಸಿ ಕಿಂದರಿಯ!

NOT TO BE REPUBLISHED @KTBS

**ಕುವೆಂಪು ವಿರಚಿತ ಬೊಮ್ಮನಹಳ್ಳಿ ಕಿಂದರಿಜೋಗಿ ಪುಸ್ತಕವನ್ನು ಶಾಲಾ ಗ್ರಂಥಾಲಯದಿಂದ ಪಡೆದು ಓದಿ, ಅಭಿಪ್ರಾಯ ಮತ್ತು ಅನಿಸಿಕೆಗಳನ್ನು ತರಗತಿಯಲ್ಲಿ ಹಂಚಿಕೊಳ್ಳೋಣ.**

## ಈ ವಾಕ್ಯಗಳಿಗೆ ಸೂಕ್ತ ಲೇಖನ ಚಿಹ್ನೆಗಳನ್ನು ಹಾಕೋಣ.

೧. ಏನಿದು ☐ ಏನಿದು ಗಜಿಬಿಜಿಯೆಲ್ಲಿ ☐ ಊರನೆ ಮುಳುಗಿಪ ನಾದವಿದೆಲ್ಲಿ ☐

೨. ಓಹೋ ☐ ಬಂದವು ಹಿಂಡಿಂಡಾಗಿ

೩. ಕುಂಟಿಲಿ ☐ ಕಿವುಡಿಲಿ ☐ ಹೆಳವಿಲಿ ☐ ಮೂಗಿಲಿ ಚೀ ಪೀ ಎನ್ನುತ ಕೂಗುತಲೋಡಿ

೯. ಮಾದರಿ ವಾಕ್ಯಗಳನ್ನು ಗಮನಿಸಿ ಲೇಖನ ಚಿಹ್ನೆ ಸಹಿತ ಎರಡೆರಡು ವಾಕ್ಯಗಳನ್ನು ರಚಿಸೋಣ.

ಪೂರ್ಣವಿರಾಮ ಚಿಹ್ನೆ ( .)

ಮಾದರಿ: ಮಕ್ಕಳು ಶಾಲೆಯಲ್ಲಿ ಆಟ ಆಡಿದರು.

ಅಲ್ಪವಿರಾಮ ಚಿಹ್ನೆ ( ,)

ಮಾದರಿ: ನಾನು, ನೀನು, ರವಿ, ಸವಿ ಎಲ್ಲರೂ ನೃತ್ಯ ಮಾಡೋಣ.

ಪ್ರಶ್ನಾರ್ಥಕ ಚಿಹ್ನೆ ( ?)

ಮಾದರಿ: ನಿನ್ನ ಊರು ಯಾವುದು?

ಭಾವಸೂಚಕ ಚಿಹ್ನೆ ( !)

ಮಾದರಿ: ಅಯ್ಯೋ..! ಪಾಪ ಅವನು ಕಾಲು ಜಾರಿ ಬಿದ್ದ.

@KTBS NOT TO BE REPUBLISHED

## ೧೦. ಕೊಟ್ಟಿರುವುದನ್ನು ಗಟ್ಟಿಯಾಗಿ ಓದಿ, ಪದೇ ಪದೇ ಬಳಕೆಯಾಗಿರುವ ಪದಗಳನ್ನು ಗುರುತಿಸಿ ಬರೆಯೋಣ.



ಪದೇ ಪದೇ ಬಳಕೆಯಾಗುವ ಪದಗಳನ್ನು 'ಪುನರಾವರ್ತಿತ ಪದಗಳು' ಎನ್ನುವರು.

ತರೀಕೆರೆ ಮುದುಕ ಸಂತೆಗೆ ಹೋದನು॥
ತರೀಕೆರೆ ಮುದುಕ, ಮುದುಕನ ಹೆಂಡತಿ, ಸಂತೆಗೆ ಹೋದರು॥
ತರೀಕೆರೆ ಮುದುಕ, ಮುದುಕನ ಹೆಂಡತಿ,

ಹೆಂಡತಿಯ ಮಗಳು ಸಂತೆಗೆ ಹೋದಳು॥
ತರೀಕೆರೆ ಮುದುಕ, ಮುದುಕನ ಹೆಂಡತಿ,
ಹೆಂಡತಿಯ ಮಗಳು, ಮಗಳ ಗಂಡ ಸಂತೆಗೆ ಹೋದರು॥

ತರೀಕೆರೆ ಮುದುಕ, ಮುದುಕನ ಹೆಂಡತಿ,
ಹೆಂಡತಿಯ ಮಗಳು, ಮಗಳ ಗಂಡ,
ಗಂಡನ ನಾಯಿ ಸಂತೆಗೆ ಹೋಯಿತು॥

ತರೀಕೆರೆ ಮುದುಕ, ಮುದುಕನ ಹೆಂಡತಿ,
ಹೆಂಡತಿಯ ಮಗಳು, ಮಗಳ ಗಂಡ,
ಗಂಡನ ನಾಯಿ, ನಾಯಿಯ ಬಾಲ ಸಂತೆಗೆ ಹೋಯಿತು॥

ತರೀಕೆರೆ ಮುದುಕ, ಮುದುಕನ ಹೆಂಡತಿ,
ಹೆಂಡತಿಯ ಮಗಳು, ಮಗಳ ಗಂಡ,
ಗಂಡನ ನಾಯಿ, ನಾಯಿಯ ಬಾಲ,
ಬಾಲದ ತುದಿಯು ಸಂತೆಗೆ ಹೋಯಿತು॥

NOT TO BE REPUBLISHED @KTBS

**ಪುನರಾವರ್ತಿತ ಪದಗಳು:**

______________________________

______________________________

______________________________

______________________________

______________________________

**ಹೀಗೆ ಮಾಡು:** ಪುನರಾವರ್ತಿತ ಪದಗಳನ್ನು ಹೊಂದಿರುವ ಜನಪ್ರಿಯ ಕನ್ನಡ ಗೀತೆಗಳನ್ನು ಹಿರಿಯರ ಸಹಾಯದಿಂದ ಸಂಗ್ರಹಿಸು.

## ೧೧. ಗೋಡೆ ಬರೆಹವನ್ನು ಓದಿ, ಗೆಳೆಯರೊಂದಿಗೆ ಮಾತನಾಡೋಣ.




## ೧೨. ಶಾಲೆ ಮತ್ತು ಅಕ್ಷರ ದಾಸೋಹ ಕೋಣೆಯಲ್ಲಿರುವ ಬರೆಹಗಳನ್ನು ಗಮನಿಸಿ ಕೆಲವನ್ನು ಇಲ್ಲಿ ಬರೆಯೋಣ.

@KTBS
NOT TO BE REPUBLISHED

## ೧೩. ನಿಯೋಜಿತ ಕಾರ್ಯ: ಬಿಸಿಯೂಟದ ಮೆನು ಚಾರ್ಟನ್ನು ತಯಾರಿಸೋಣ.

@KTBS
NOT TO BE REPUBLISHED

## ೧೪. ಇದುವರೆಗೂ ಕಲಿತಿರುವ ಹೊಸ ಪದಗಳ ಉಕ್ತಲೇಖನವನ್ನು ತೆಗೆದುಕೊಳ್ಳೋಣ.

| ಕ್ರ.ಸಂ | ಪದಗಳು | ಕ್ರ.ಸಂ | ಪದಗಳು |
|---|---|---|---|
| 1. | | 11. | |
| 2. | | 12. | |
| 3. | | 13. | |
| 4. | | 14. | |
| 5. | | 15. | |
| 6. | | 16. | |
| 7. | | 17. | |
| 8. | | 18. | |
| 9. | | 19. | |
| 10. | | 20. | |

@KTBS NOT TO BE REPUBLISHED

**ತಪ್ಪಾದ ಪದಗಳನ್ನು ಸರಿಪಡಿಸಿ ಬರೆಯೋಣ.**

| | |
|---|---|
| | |
| | |
| | |
| | |
| | |

★ ಸುಗಮಕಾರರು ಪಠ್ಯದಲ್ಲಿ ಕಲಿತ ಪದಗಳನ್ನು ಉಕ್ತಲೇಖನ ನೀಡಿ, ದೃಢೀಕರಿಸಿ, ಹಿಮ್ಮಾಹಿತಿ ನೀಡುವುದು.

# ೧೦. ಪತ್ರಿಕೆ ಓದೋಣ– ಸುದ್ದಿ ತಿಳಿಯೋಣ

**ಪ್ರವೇಶ : ಗಮನಿಸಿ, ಓದಿ–ಬರೆಯೋಣ.**




೧. ಇಲ್ಲಿ ಕಾಣುವ ದಿನಪತ್ರಿಕೆಗಳನ್ನು ಹೆಸರಿಸು.

@KTBS NOT TO BE REPUBLISHED

೨. ನಿಮ್ಮ ಶಾಲೆಯಲ್ಲಿ ತರಿಸುವ ದಿನಪತ್ರಿಕೆಯ ಹೆಸರು ________________

೩. ಈ ದಿನ ಓದಿದ ದಿನಪತ್ರಿಕೆಯ ಯಾವುದಾದರೂ ಮುಖ್ಯಾಂಶಗಳನ್ನು ಬರೆ.

________________________________________

________________________________________

________________________________________

________________________________________

೪. ದಿನಪತ್ರಿಕೆಗಳನ್ನು ಓದುವುದರಿಂದ ನಮಗಾಗುವ ಉಪಯೋಗಗಳನ್ನು ಗೆಳೆಯರೊಂದಿಗೆ ಚರ್ಚಿಸು.

## ೧. ಹುಡುಕಿ ತಿಳಿ–ಬರೆದು ಕಲಿ.



೧) ಇವುಗಳ ಕುರಿತು ಗೆಳೆಯರೊಂದಿಗೆ ಚರ್ಚಿಸು.

೨) ನಿಮ್ಮ ಶಾಲಾ ಗ್ರಂಥಾಲಯದಲ್ಲಿ ನೀನು ನೋಡಿರುವ ಯಾವುದಾದರೂ 4 ಮಕ್ಕಳ ನಿಯತಕಾಲಿಕೆ ಅಥವಾ ಮಕ್ಕಳ ಸಾಹಿತ್ಯ ಪುಸ್ತಕಗಳನ್ನು ಹೆಸರಿಸು.

@KTBS
NOT TO BE REPUBLISHED

೩) ನಿನಗಿಷ್ಟವಾದ ಯಾವುದಾದರೊಂದು ಮಕ್ಕಳ ಸಾಹಿತ್ಯ ಪುಸ್ತಕದ ಬಗ್ಗೆ ಎರಡು–ಮೂರು ವಾಕ್ಯಗಳಲ್ಲಿ ಬರೆ.

## ೨. ವಾರ್ತಾ ಪತ್ರಿಕೆಯನ್ನು ಓದಿ–ಬರೆಯೋಣ.

**ಸುಭಾಷಿತ :**

**ಸ್ಥಳೀಯ ಸುದ್ದಿ :**

೧.

೨.

**ಕ್ರೀಡೆ :**

೧.

೨.

@KTBS
NOT TO BE REPUBLISHED

**ನಿನ್ನ ಇಷ್ಟದ ವಿಷಯ :**

೧.

೨.

೩.

ದಿನಾಂಕ : 22/2/2024

# ಜೋಗದ ಪತ್ರ

ಹಾಯ್ ಮಕ್ಕಳೇ,

ನೀವು ನಿಮ್ಮೂರಿನಲ್ಲಿ ಕೆರೆ, ಬಾವಿ, ಹೊಂಡ, ನದಿ ಮತ್ತು ಹಳ್ಳ-ಕೊಳ್ಳಗಳನ್ನು ನೋಡಿದ್ದೀರಲ್ಲವೇ? ಜೋರಾಗಿ ಬರುವ ಮಳೆಗೆ ಅವು ತುಂಬಿ ಹರಿಯುವುದನ್ನು ನೀವು ನೋಡಿರಬಹುದು. ಮನೆಯ ಸೂರಿನಿಂದ ನೀರು ಬೀಳುವುದನ್ನು ತುಂಬಾ ಹತ್ತಿರದಿಂದ ನೋಡಿರಬಹುದು. ಆದರೆ ತುಂಬಾ ಎತ್ತರದಿಂದ ಬೀಳುವ ನೀರನ್ನು ಎಂದಾದರು ನೋಡಿದ್ದೀರಾ?



ನಾನು ಪ್ರಕೃತಿಯ ಒಂದು ಭಾಗ. ಬಹಳ ಎತ್ತರದಿಂದ ಕೆಳಗೆ ಧುಮ್ಮಿಕ್ಕಿ ಹರಿಯುವ ಶರಾವತಿ ನದಿ ನಾನಾಗಿರುವೆ. ಹಾಗಾದರೆ ನಾನು ಯಾರು ಗೊತ್ತೇ...? ನಾನೇ ನಿಮ್ಮ ಅಚ್ಚುಮೆಚ್ಚಿನ 'ಜೋಗ ಜಲಪಾತ'.

ಮಾನವನಾಗಿ ಹುಟ್ಟಿದ ಮೇಲೆ ಏನೇನ್ ಕಂಡಿ?
ಸಾಯೋತನಕ ಸಂಸಾರ್ದೊಳಗೆ ಗಂಡಾ ಗುಂಡಿ
ಏರಿಕೊಂಡು ಹೋಗೋದಿಲ್ಲ ಸತ್ತಾಗ ಬಂಡಿ
ಇರೋದ್ರೊಳಗೆ ಒಮ್ಮೆ ನೋಡು ಜೋಗದ ಗುಂಡಿ...

– ಮೂಗೂರು ಮಲ್ಲಪ್ಪ

| ಪದ-ಪದಗಳ ಅರ್ಥ | |
|---|---|
| ಸೂರು | ಮನೆಯ ಛಾವಣಿ |
| ಜಲಪಾತ | ನೀರು ಧುಮುಕುವ ಸ್ಥಳ |
| ಪಯಣ | ಸಂಚಾರ |

NOT TO BE REPUBLISHED @KTBS

ನನ್ನ ಕುರಿತಾದ ಈ ಹಾಡಿನಲ್ಲಿ ಬರುವ ನಾಲ್ಕು ಜಲಧಾರೆಗಳ ಬಗ್ಗೆ ಕೇಳಿದ್ದೀರಿ ಅಲ್ಲವೇ? ಅವುಗಳೇ ರಾಜ, ರಾಣಿ, ರೋರರ್ ಮತ್ತು ರಾಕೆಟ್‌ಗಳು. ನಾನು ರಾಜನಾಗಿ ವೈಭವದಿಂದ, ರೋರರ್ ರೂಪದಲ್ಲಿ ರಭಸದಿಂದ, ಇನ್ನು ರಾಣಿಯಾಗಿ ಬಳ್ಳಿಯಂತೆ ಬಳುಕುತ್ತಾ, ಹಾಗೆಯೇ ರಾಕೆಟ್ ವೇಗದಲ್ಲಿ ಬಂಡೆಗಳ ಮಧ್ಯೆ ಪ್ರಪಾತಕ್ಕೆ ಧುಮುಕುತ್ತೇನೆ. ಹೀಗೆ ನಾನು ಬೀಳುವ ರಭಸಕ್ಕೆ ಗುಂಡಿ ಆಗಿರುವುದರಿಂದ ನನ್ನನ್ನು "ಜೋಗದ ಗುಂಡಿ" ಎಂದೂ ಕರೆಯುವುದುಂಟು. ಜನರು ನನ್ನನ್ನು ನೋಡಲು, ನನ್ನ ಸೊಬಗನ್ನು ಸವಿಯಲು ದೇಶ ವಿದೇಶಗಳಿಂದ ಬರುತ್ತಾರೆ.

ನನಗೆ ಒಂದೇ ಒಂದು ಬೇಸರವೆಂದರೆ, ನನ್ನಿಂದ ಖುಷಿ ಪಡುವ ಜನರು ತಾವು ತರುವ ತಿಂಡಿ ತಿಂದು ಪ್ಲಾಸ್ಟಿಕ್ ಚೀಲಗಳನ್ನು ಎಲ್ಲೆಂದರಲ್ಲಿ ಎಸೆದು ಹೋಗುತ್ತಿದ್ದಾರೆ. ಇದರಿಂದ ನನಗೆ ತುಂಬಾ ನೋವಾಗುತ್ತಿದೆ. ಅದಕ್ಕಾಗಿ ನನ್ನದೊಂದು ಮನವಿ. ನನ್ನನ್ನು ನೋಡಲು ಬರುವ

ನೀವು 'ತಿಂಡಿ ತಿಂದು, ಉಳಿದ ಚೀಲಗಳನ್ನು ಎಲ್ಲೆಂದರಲ್ಲಿ ಎಸೆಯಬೇಡಿ'. 'ಕಸವನ್ನು ಕಸದ ಡಬ್ಬಿಯಲ್ಲಿಯೇ ಹಾಕಿ'. 'ಎಲ್ಲೆಂದರಲ್ಲಿ ಉಗುಳಬೇಡಿ', 'ಸ್ವಚ್ಛತೆ ಕಾಪಾಡಿ'. ಆಗ ನಿಮ್ಮನ್ನು ಖುಷಿಯಿಂದ ಸದಾ ಕೈಬೀಸಿ ಕರೆಯುತ್ತೇನೆ.

ಇಷ್ಟೆಲ್ಲಾ ಕೇಳಿದ ಮೇಲೆ ನಿಮಗೆ ನನ್ನನ್ನು ನೋಡಬೇಕು ಅಂತ ಅನ್ನಿಸಿರಬೇಕು ಅಲ್ಲವೇ? ನಿಮ್ಮ ಶಿಕ್ಷಕರೊಡನೆ ಅಥವಾ ಪೋಷಕರೊಡನೆ ಬನ್ನಿ. ನನ್ನನ್ನು ನೋಡಿ ಆನಂದಿಸಿ. ಬಂದವರು ಸುಮ್ಮನೆ ಹೋಗಬೇಡಿ ನೆನಪಿಗಾಗಿ ಒಂದೆರಡು ಫೋಟೋ ತೆಗೆಸಿಕೊಳ್ಳಿ.

ಇಂತಿ ನಿಮ್ಮ
**ಜೋಗ ಜಲಪಾತ**

## ೧. ಶಬ್ದಕೋಶ ಬಳಸಿ ಹೊಸ ಪದಗಳ ಅರ್ಥ ಹುಡುಕೋಣ.

| | |
|---|---|
| ಜಲಧಾರೆ: | ರಭಸ: |
| ವೈಭವ: | ಬಳುಕು: |
| ಪ್ರಪಾತ: | ಧುಮುಕು: |

## ೨. ಸುಳಿವು ಬಳಸಿ ಅನುಪಾಲನೆ ಬರೆಯೋಣ.

| ಸೂಚನೆ | ಅನುಪಾಲನೆ |
|---|---|
| ಕಸವನ್ನು ಎಲ್ಲೆಂದರಲ್ಲಿ ಹಾಕಬೇಡಿ. | |
| ಅಪಾಯ, ನೀರಿಗೆ ಇಳಿಯಬೇಡಿ. | |
| ಎಲ್ಲೆಂದರಲ್ಲಿ ಉಗುಳಬೇಡಿ. | |
| ಸುಳಿವುಗಳಿವೆ, ನೀರಿನಲ್ಲಿ ಈಜಬೇಡಿ. | |
| ಪ್ಲಾಸ್ಟಿಕ್ ಬಳಸಬೇಡಿ. | |
| ವಸ್ತುಗಳನ್ನು ಎಲ್ಲೆಂದರಲ್ಲಿ ಬಿಸಾಡಬೇಡಿ. | |
| ಸ್ವಚ್ಛತೆಯನ್ನು ಕಾಪಾಡಿ. | |

| ಸುಳಿವುಗಳು | |
|---|---|
| * ಕಸದ ಬುಟ್ಟಿಯಲ್ಲಿಯೇ ಹಾಕುತ್ತೇನೆ.<br>* ಪೇಪರ್/ಬಟ್ಟೆ ಬ್ಯಾಗ್‌ಗಳನ್ನು ಬಳಸುತ್ತೇನೆ.<br>* ಸ್ವಚ್ಛತೆಯ ನಿಯಮ ಪಾಲಿಸುತ್ತೇನೆ.<br>* ಸುರಕ್ಷತೆ ಕ್ರಮ ಅನುಸರಿಸುತ್ತೇನೆ. | * ಓರಣವಾಗಿ ಇಟ್ಟುಕೊಳ್ಳುತ್ತೇನೆ.<br>* ನಿಗದಿತ ಜಾಗದಲ್ಲಿ ಉಗುಳುತ್ತೇನೆ.<br>* ಹಿರಿಯರ ನೆರವು ಪಡೆಯುತ್ತೇನೆ. |

@KTBS NOT TO BE REPUBLISHED

೩. ಒಂದನ್ನು ಗಮನಿಸಿ, ಇನ್ನೊಂದನ್ನು ಬರೆಯೋಣ.

**ಪ್ರವಾಸ**

ನಮ್ಮ ಶಾಲೆಯಿಂದ **ಪ್ರವಾಸ**ಕ್ಕೆ ಹೋಗಲು ಸಿದ್ಧತೆ ನಡೆಯುತ್ತಿದೆ.

**ಚಿಮ್ಮು**

ಕಾರಂಜಿಯಲ್ಲಿ ನೀರು **ಚಿಮ್ಮು**ವುದನ್ನು ನೋಡಲು ನನಗೆ ಬಹಳ ಇಷ್ಟ

**ಮುನ್ನುಗ್ಗು**

____________________________

____________________________

**ಕುಪ್ಪಳಿಸು**

____________________________

____________________________

@KTBS
NOT TO BE REPUBLISHED

೪. ಜೋಗ ಜಲಪಾತವೇ ಬರೆದಿರುವ ಪತ್ರದಲ್ಲಿ ಇಷ್ಟವಾದ 3–4 ವಾಕ್ಯಗಳನ್ನು ಬರೆಯೋಣ.

____________________________

____________________________

____________________________

____________________________

೫. ಈ ಶುಭಾಶಯ ಪತ್ರ ಯಾವ ವಿಷಯಕ್ಕೆ ಸಂಬಂಧಿಸಿದೆ ಎಂಬುದನ್ನು ಬರೆಯೋಣ.




೬. ಗೆಳೆಯರಿಗಾಗಿ ಶುಭಾಶಯ ಪತ್ರ ರಚಿಸೋಣ.

@KTBS
NOT TO BE REPUBLISHED

**ಹೀಗೆ ಮಾಡು:** ಬಂಧುಗಳಿಗೆ, ಸ್ನೇಹಿತರಿಗೆ ಶುಭಾಶಯ ಪತ್ರವನ್ನು ರಚಿಸಿ, ಶುಭಾಶಯ ತಿಳಿಸು.

## ೭. ಈ ಪತ್ರವನ್ನು ಗಟ್ಟಿಯಾಗಿ ಓದಿ, ವಿಷಯವನ್ನು ತಿಳಿಯೋಣ.

ಕ್ಷೇಮ ಶ್ರೀ ದಿನಾಂಕ: 20/11/2022

ನಲ್ಮೆಯ ಗೆಳತಿ

ಹೇಗಿದ್ದೀಯ? ನಾವೆಲ್ಲರೂ ಇಲ್ಲಿ ಚೆನ್ನಾಗಿದ್ದೇವೆ. ನನಗೆ ಈ ದಿನ ಪತ್ರ ಬರೆಯಲು ತುಂಬಾ ಸಂತೋಷವಾಗುತ್ತಿದೆ. ಮೊನ್ನೆ ದಿನ ನಮ್ಮ ಶಾಲೆಯಲ್ಲಿ ಪ್ರತಿಭಾಕಾರಂಜಿ ಇತ್ತು. ಕಂಠಪಾಠ, ಛದ್ಮವೇಷ, ಮಣ್ಣಿನ ಮಾದರಿ, ಭಾಷಣ, ಭಕ್ತಿಗೀತೆ, ಲಘು ಸಂಗೀತ ಮುಂತಾದ ಸ್ಪರ್ಧೆಗಳಿದ್ದವು. ಬೇರೆ ಬೇರೆ ಶಾಲೆಗಳಿಂದ ತುಂಬಾ ಮಕ್ಕಳು ಬಂದಿದ್ದರು. ಆ ದಿನ ನಮ್ಮ ಊರಿನಲ್ಲಿ ಹಬ್ಬದ ವಾತಾವರಣ ಇತ್ತು.

ರುಚಿಯಾದ ಊಟ ಹಾಗೂ ಬಹುಮಾನಗಳು ನಮ್ಮ ಖುಷಿಗೆ ಕಾರಣವಾದವು. ಅಭಿನಯಗೀತೆ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಬಂದಿತು. ನೀನು ಪತ್ರ ಬರೆದು ತುಂಬಾ ದಿನಗಳಾಯಿತು. ಪತ್ರ ಓದಿದ ನಂತರ ಮರಳಿ ಪತ್ರ ಬರೆಯುವುದನ್ನು ಮರೆಯಬೇಡ.

@KTBS
NOT TO BE REPUBLISHED

ಇಂತೀ ನಿನ್ನ ಪ್ರೀತಿಯ,
ಯೋಗಿತ ಹೆಚ್.ಇ.
3ನೇ ತರಗತಿ.

ಇಂದ,
ಯೋಗಿತ ಹೆಚ್.ಇ.
ಮೂರನೇ ತರಗತಿ
ಸ.ಕಿ.ಪ್ರಾ.ಶಾಲೆ. ಮರ್ಲೆ ಹೊಸಳ್ಳಿ
ಮರ್ಲೆ (ಅಂಚೆ), ಚಿಕ್ಕಮಗಳೂರು ತಾ॥
ಚಿಕ್ಕಮಗಳೂರು ಜಿಲ್ಲೆ – 577101

पोस्ट कार्ड POST CARD
प्र.सु./SPP/HYD - 2017




ಧನ್ವಿಕ
ಮೂರನೇ ತರಗತಿ. ಸ.ಹಿ.ಪ್ರಾ. ಶಾಲೆ
ತಲಮಕ್ಕಿ. ಕೊಪ್ಪ ತಾಲ್ಲೂಕು
ಚಿಕ್ಕಮಗಳೂರು ಜಿಲ್ಲೆ

पिन PIN 5 7 7 1 2 7

(इस लाइन के नीचे न तो लिखें और न ही मुद्रित करें Do not write or print below this line)

## ೮. ನನ್ನ ಸ್ನೇಹಿತ / ಸ್ನೇಹಿತೆ / ಕುಟುಂಬ ಸದಸ್ಯರಿಗೆ ಒಂದು ಪತ್ರ ಬರೆಯುವೆ.

ಕ್ಷೇಮ ಶ್ರೀ ದಿನಾಂಕ:

ನಲ್ಮೆಯ ಗೆಳೆಯ / ಗೆಳತಿ

ಇಂತೀ ನಿನ್ನ ಪ್ರೀತಿಯ,

ಇಂದಾ,




©KTBS
NOT TO BE REPUBLISHED

## ೯. ಇವುಗಳ ಬಗ್ಗೆ ಕೇಳಿ ತಿಳಿಯೋಣ ಮತ್ತು ಹೆಸರು ಬರೆಯೋಣ.











@KTBS
NOT TO BE REPUBLISHED

✦ ಪೋಷಕರು/ ಶಿಕ್ಷಕರೊಂದಿಗೆ ಸಮೀಪದ ಅಂಚೆ ಕಛೇರಿಗೆ ಭೇಟಿ ನೀಡಿ ಅಂಚೆ ಪತ್ರ ವ್ಯವಹಾರವನ್ನು ತಿಳಿದಿಕೊ.

# ೧೦. ಪತ್ರದ ಪಯಣವನ್ನು ಗಮನಿಸೋಣ.



ಪತ್ರವನ್ನು ಬರೆಯುವುದು.




ಅಂಚೆ ಪೆಟ್ಟಿಗೆಯಿಂದ ತೆಗೆದ ಪತ್ರಗಳಿಗೆ ಮುದ್ರೆ ಹಾಕುವುದು.



ಅಂಚೆ ಪೆಟ್ಟಿಗೆಯಿಂದ ಪತ್ರವನ್ನು ತೆಗೆಯುವುದು.



ಬಂದ ಪತ್ರಗಳನ್ನು ವಿಳಾಸಕ್ಕೆ ಅನುಗುಣವಾಗಿ ವಿಂಗಡಿಸುವುದು.




ಮುದ್ರೆ ಹಾಕಿದ ಪತ್ರಗಳನ್ನು ರವಾನಿಸುವುದು.



ತಲುಪಿದ ಪತ್ರವನ್ನು ಓದುವುದು.

@KTBS NOT TO BE REPUBLISHED

೧೧.ಪತ್ರ ಪಯಣದ ಹಂತಗಳಿಗೆ ಅನುಕ್ರಮ ಸಂಖ್ಯೆಗಳನ್ನು ನೀಡಿ, ಅವುಗಳ ಬಗ್ಗೆ ಮಾತನಾಡೋಣ.














@KTBS
NOT TO BE REPUBLISHED

೧೨. **ನಿಯೋಜಿತ ಕಾರ್ಯ:** ವಿವಿಧ ಮಾದರಿಯ ಲಕೋಟೆಗಳನ್ನು ಹಾಗೂ ಸ್ಟ್ಯಾಂಪ್‌ಗಳನ್ನು ಸಂಗ್ರಹಿಸಿ ಶಾಲೆಯಲ್ಲಿ ಪ್ರದರ್ಶಿಸಿ. ಸಂಗ್ರಹಿಸಿದ ಸ್ಟ್ಯಾಂಪ್‌ಗಳಲ್ಲಿ ಕೆಲವನ್ನು ಆಯ್ಕೆ ಮಾಡಿ ಇಲ್ಲಿ ಅಂಟಿಸಿ.

@KTBS
NOT TO BE REPUBLISHED

## ೧೩. ಇದುವರೆಗೂ ಕಲಿತಿರುವ ಹೊಸ ಪದಗಳ ಉಕ್ತಲೇಖನವನ್ನು ತೆಗೆದುಕೊಳ್ಳೋಣ.

| ಕ್ರ.ಸಂ | ಪದಗಳು | ಕ್ರ.ಸಂ | ಪದಗಳು |
|---|---|---|---|
| 1. | | 11. | |
| 2. | | 12. | |
| 3. | | 13. | |
| 4. | | 14. | |
| 5. | | 15. | |
| 6. | | 16. | |
| 7. | | 17. | |
| 8. | | 18. | |
| 9. | | 19. | |
| 10. | | 20. | |

@KTBS NOT TO BE REPUBLISHED

**ತಪ್ಪಾದ ಪದಗಳನ್ನು ಸರಿಪಡಿಸಿ ಬರೆಯೋಣ.**

| | |
|---|---|
| | |
| | |
| | |
| | |
| | |

★ ಸುಗಮಕಾರರು ಪಠ್ಯದಲ್ಲಿ ಕಲಿತ ಪದಗಳನ್ನು ಉಕ್ತಲೇಖನ ನೀಡಿ, ದೃಢೀಕರಿಸಿ, ಹಿಮ್ಮಾಹಿತಿ ನೀಡುವುದು.

## ಮೌಲ್ಯಾಂಕನ–ಸೂಚಿತ ಕಲಿಕಾ ಫಲಗಳು

| ಕಲಿಕಾಂಶ | ಕಲಿಕಾಫಲಗಳು |
|---|---|
| ಆನೆ ಬಂತೊಂದ್ ಆನೆ | ಕಥೆಯನ್ನು ಓದುವಾಗ ಅಪರಿಚಿತ ಪದಗಳನ್ನು ವಿವಿಧ ಪಠ್ಯಗಳೊಂದಿಗೆ ಸಂಬಂಧೀಕರಿಸಿ ಅರ್ಥೈಸಿಕೊಳ್ಳುವರು. |
| | ಮುದ್ರಿತ ಪುಸ್ತಕದ ಪುಟಗಳ ಸಂಖ್ಯೆಯನ್ನು ಗುರುತಿಸಿ ಓದುವರು ಮತ್ತು ಬರೆಯುವರು. |
| ಯಕ್ಷಗಾನ | ವಿವಿಧ ಪಠ್ಯ (ವಾರ್ತಾಪತ್ರಿಕೆ, ಮಕ್ಕಳ ನಿಯತಕಾಲಿಕೆ ಇತ್ಯಾದಿ)ಗಳನ್ನು ಅರ್ಥಗ್ರಹಿಕೆಯೊಂದಿಗೆ ಓದಿ ಸಂಕ್ಷಿಪ್ತವಾಗಿ ಬರೆಯುವರು. |
| | ಇತರರ ಕೈ ಬರೆಹಗಳನ್ನುವನ್ನು ಓದುವರು. (ಉದಾ: ಪತ್ರಲೇಖನ, ಶುಭಾಶಯ ಪತ್ರ ಇತ್ಯಾದಿ) |
| ಹೂವಾಡಗಿತ್ತಿ (ಪದ್ಯ) | ಬೇರೆ ಬೇರೆ ಕಥೆಗಳು/ಪದ್ಯಗಳು/ಪಠ್ಯಗಳಲ್ಲಿನ ಭಾಷಾ ವೈಶಿಷ್ಟ್ಯಗಳನ್ನು/ರಚನೆಗಳನ್ನು ಗುರುತಿಸುವರು. (ಉದಾ: ಹೆಸರನ್ನು ಸೂಚಿಸುವ ಪದಗಳು, ಕ್ರಿಯೆಯನ್ನು ಸೂಚಿಸುವ ಪದಗಳು, ಪುನರಾವರ್ತಿತ ಪದಗಳು ಹಾಗೂ ಲೇಖನ ಚಿಹ್ನೆಗಳು) |
| | ಹೆಸರನ್ನು ಸೂಚಿಸುವ ಪದಗಳು, ಕ್ರಿಯೆಯನ್ನು ಸೂಚಿಸುವ ಪದಗಳು, ಪುನರಾವರ್ತಿತ ಪದಗಳು ಹಾಗೂ ಲೇಖನಚಿಹ್ನೆಗಳನ್ನು ಬರವಣಿಗೆಯಲ್ಲಿ ಬಳಸುವರು. |
| | ಸೂಕ್ತ ಸ್ವರಭಾರದೊಂದಿಗೆ, ಸರಿಯಾದ ವೇಗದಲ್ಲಿ, ದಿನನಿತ್ಯ ಗಮನಿಸುವ ಬರೆಹಗಳನ್ನು ಓದುವರು. (ಉದಾ: ಮಧ್ಯಾಹ್ನದ ಬಿಸಿಯೂಟದ ಚಾರ್ಟ್, ಶಾಲಾ ಗೋಡೆ ಬರಹ, ಜಾಹೀರಾತು ಬರಹ ಇತ್ಯಾದಿ) |
| ನಮ್ಮ ಶಾಲಾ ಪತ್ರಿಕೆ | ಶಾಲಾ ಪ್ರಾರ್ಥನಾ ಚಟುವಟಿಕೆಗಳಲ್ಲಿ ಭಾಗವಹಿಸುವ ಮೂಲಕ ಮಾತುಕತೆ ನಡೆಸುವರು. |
| | ತಮಗಿಷ್ಟವಾದ ಚಟುವಟಿಕೆಗಳ ಬಗ್ಗೆ ಮಾತನಾಡುವರು ಮತ್ತು ಅಭಿಪ್ರಾಯ/ಅನಿಸಿಕೆಯನ್ನು ಕಪ್ಪುಹಲಗೆ/ಪ್ರದರ್ಶನ ಬೋರ್ಡ್/ವಿವಿಧ ಚಾರ್ಟ್/ಸಲಹಾ ಪೆಟ್ಟಿಗೆ ಇತ್ಯಾದಿಗಳಲ್ಲಿ ಬರೆದು ಹಾಕುವರು. |
| ಕಿತ್ತೂರುರಾಣಿ ಚೆನ್ನಮ್ಮ (ಲಾವಣಿ) | ಪರಿಚಿತ ಸಾಹಿತ್ಯವನ್ನು ವಿಭಿನ್ನ ರೂಪದಲ್ಲಿ ಬರೆಯುವರು. (ಉದಾ: ಮುಖ್ಯ ವಿಷಯ, ಪಾತ್ರ, ಶೀರ್ಷಿಕೆ, ಚಿತ್ರ, ಸಂಕೇತ ಇತ್ಯಾದಿಗಳನ್ನು ಬಳಸಿ.) |
| ಪತ್ರಿಕೆ ಓದೋಣ ಸುದ್ದಿ ತಿಳಿಯೋಣ | ಮಾಹಿತಿ ನೀಡುವ ಮತ್ತು ಕೇಳಬೇಕಾದ ಇತರೆ ವಿಷಯವನ್ನು ಕಡಿಮೆ ಪದಗಳಲ್ಲಿ ಬರೆದು ಹೇಳುವರು. (ಉದಾ: ನನ್ನ ನೀಲಿ ಬಣ್ಣದ ಸೈಕಲ್ ಕಳೆದುಹೋಗಿದೆ, ನೋಡಿದವರು ಕೂಡಲೇ ಮಾಹಿತಿ ನೀಡಿ.) |

**ಸೂಚನೆ:** 8–12ರವರೆಗಿನ ಕಲಿಕಾ ಫಲಗಳನ್ನು FA-03 ರಲ್ಲಿಯೂ, 13 ರಿಂದ 18ರವರೆಗಿನ ಕಲಿಕಾ ಫಲಗಳನ್ನು FA-04 ರಲ್ಲಿಯೂ ಹಾಗೂ 08 ರಿಂದ 18ರವರೆಗಿನ ಕಲಿಕಾ ಫಲಗಳನ್ನು SA-02 ರಲ್ಲಿ ಪರಿಗಣಿಸಿ ಮೌಲ್ಯಾಂಕನಕ್ಕೆ ಸಿದ್ಧತೆ ಮಾಡಿಕೊಳ್ಳುವುದು.

✪✪✪✪✪

NOT TO BE REPUBLISHED ©KTBS